(b) due to this the number of teachers posts fallen vacant and the number of posts vacant in Mysore District and in Periyapatna Taluk ;

(c) the action taken by Government to fill up them?

SMT NAGAMMA C. KESHAVAMURTHY (Minister of State for Primary and Secondary Education).—

(a) Yes.

(b) There were 6669 posts of Primary School Teachers vacant throughout the State as on 20-4-1981. In Mysore District 425 posts of Primary School teachers are vacant out of this 41 posts are vacant in Periyapatna Taluk.

(c) Special Recruitment Rules 1981 were published on 23-4-1981 for recruitment of Primary School Teachers and accordingly action is being taken to fill up the Vacant Posts.

REPRESENTATION OF MEMBERS

ಶ್ರೀ ಟಿ. ಬಿ. ಜಯಚಂದ್ರ.—ನಾನು ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿಕೊಟ್ಟು ೨೦ ದಿವಸಗಳಾದವು. ಕಳ್ಳಂಬೆಳ್ಳದಲ್ಲಿ ನಿಮ್ನ ವರ್ಗಕ್ಕೆ ಸೇರಿದ ವ್ಯಕ್ತಿಯೆನ್ನು ಕೊಲೆ ಮಾಡಿದ್ದಾರೆ. ಆ ಸಂಬಂಧದಲ್ಲಿ ಇದುವರೆಗೆ ಯಾರನ್ನೂ ಅರೆಸ್ಟ್ ಮಾಡಿಲ್ಲ. ಆ ಬಗ್ಗೆ ಸರ್ಕಾರದ ಗಮನವನ್ನು ಸೆಳೆದರೂ ಕೂಡ ಇದುವರೆಗೆ ಏನು ಕ್ರಮ ತೆಗೆದುಕೊಂಡಿಲ್ಲ. ಆದ್ದರಿಂದ, ಇದಕ್ಕೆ ಬೇಗ ಉತ್ತರ ತರಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

SRI PRABHAKAR TELKAR.—Sir, I have sent another notice. There are several important matters. There is a village by name Rajapur. During the rainy season, the school children are unable to reach that village. That is pending.

MR. SPEAKER.—Let us take up Calling Attention matters.

ಗಮನ ಸೆಳೆಯುವ ಸೂಚನೆ

ವಿಷಯ.—ರಾಜ್ಯದ ಹಲವಾರು ಭಾಗಗಳಲ್ಲಿ ಅಪಾಯಕ್ಕೆ ತುತ್ತಾದ ಕುರಿಗಳ ವಿಷಯ.

ಶ್ರೀ ಹೆಚ್. ವಿಶ್ವನಾಥ.—ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದ ಹಲವಾರು ಭಾಗಗಳನ್ನು ಆಪಾಯಕ್ಕೆ ತುತ್ತಾಗಿ ಸಾವಿರಾರು ಕುರಿಗಳು ಸತ್ತಿದ್ದು ಇದರಿಂದಸಾವಿರಾರು ಜನ ಕುರಿ ಪೋಷಕರ ಜೀವನ ಶೋಚನೀಯವಾಗಿದ್ದು ಅವರ ದಾರುಣ ಪರಿಸ್ಥಿತಿ ಬಗ್ಗೆಮತ್ತು ಅವರ ಜೀವನದ ಪರಿಹಾರದ ಬಗ್ಗೆ ಪಶು ಸಂಗೋಪನಾ ಸಚಿವರ ಗಮನವನು ಸೆಳೆಯುತ್ತೇನೆ.

ಶ್ರೀ ವೈ. ರಾಮಕೃಷ್ಣ(ಮಾನ್ಯ ಪಶುಸಂಗೋಪನಾ ಖಾತೆ ಮಂತ್ರಿಗಳು).—

ದೊಡ್ಡ ರೋಗವೆಂಬ ಖಾಯಿಲೆ, ಎರಡು ಗೊರಸುವುಳ್ಳ ಪ್ರಾಣಿಗಳ ಅಂದರೆ, ದನ, ಎಮ್ಮೆ, ಕುರಿ, ಮೇಕೆ ಹಾಗೂ ಹಂದಿಗಳಿಗೆ ಬರತಕ್ಕ ಅತಿ ತೀವ್ರ ಸಾಂಕ್ರಾಮಿಕ ರೋಗ ಈ ರೋಗ ಬಹಳ ಪುರಾತನ ಕಾಲದಿಂದಲೂ ಬೇರೂರಿರುವ ಬಹು ಕೆಟ್ಟ ಜಾಡ್ಯ. ಈ ರೋಗ ಬಂದ ರಾಸುಗಳು ಯಾವ ಚಿಕಿತ್ಸೆಯಿಂದಲೂ ಗುಣವಾಗುವುದಿಲ್ಲ. ಆದರೆ ಮುಂಜಾಗ್ರತಾ ಕ್ರಮವಾಗಿ ಲಸಿಕೆಯನ್ನು (ಚುಚ್ಚು ಮದ್ದು) ಹಾಕಿದರೆ ಮಾತ್ರ ಈ ರೋಗವನ್ನು ತಡೆಗಟ್ಟಬಹುದು.

೨. ಕರ್ನಾಟಕ ರಾಜ್ಯದಲ್ಲಿ ೩೦-೧೧-೧೯೬೩ರವರೆವಿಗೂ ಈ ರೋಗ ಒಂದೂವರೆ ದಶಕದಿಂದ ಕಂಡು ಬಂದಿರಲಿಲ್ಲ. ಆದರೆ ಹೆಬ್ಬಾಳ ಮಿಲಿಟರಿ ಫಾರಂನವರು ಉತ್ತರ ಭಾರತದ ಮೀರತ್ ಎಂಬ ಸ್ಥಳದಿಂದ ಎಮ್ಮೆಗಳನ್ನು ತಂದ ನಂತರ ದೊಡ್ಡ ರೋಗವು ಮೊದಲ ಬಾರಿಗೆ ಕಾಣಿಸಿಕೊಂಡು, ಮಿಲಿಟರಿ ಫಾರಂನ ರಾಸುಗಳು ಸಾಕಷ್ಟು ಸತ್ತವು. ಹಾಗೆಯೇ ಅಕ್ಕಪಕ್ಕದ ಗ್ರಾಮಗಳಿಗೆ ಪರಡಿ, ಬೆಂಗಳೂರು ಪಟ್ಟಣ ಮತ್ತು ಅನೇಕ ಸುತ್ತಮುತ್ತಲ ಹಳ್ಳಿಗಳಲ್ಲಿಯೂ ಕಾಣಿಸಿಕೊಂಡಿತು. ಆಗ ಸಾವಿರಾರು ರಾಸುಗಳು ಈ ರೋಗಕ್ಕೆ ತುತ್ತಾದವು. ಆದೇ ಸಂದರ್ಭದಲ್ಲಿ ಕುರಿ ಮೇಕೆ ಹಂದಿಗಳು ಸತ್ತಿದ್ದವು. ಅಂದಿನಿಂದಲೂ, ಈ ದೊಡ್ಡ ರೋಗವು ಆಲ್ಲಲ್ಲಿ ಕಾಣಿಸಿಕೊಳ್ಳುತ್ತಲೇ ಇದೆ.

೩. ಕೇಂದ್ರ ಸರ್ಕಾರದ ದೊಡ್ಡ ರೋಗ ನಿಯಂತ್ರಣ ಸಮಿತಿಯು ಆದೇಶದಂತೆ, ಈ ರೋಗಕ್ಕೆ ಜಾನುವಾರುಗಳಿಗೆ ಮಾತ್ರ ಅಂದರೆ ನಾಟಿ ತಳಿಗಳಿಗೆ ಶೇ. ೮೦ರಷ್ಟು ಜೀವರಾಸುಗಳಿಗೆ ಚುಚ್ಚುಮದ್ದು ಹಾಕುವ ಆದೇಶವನ್ನು ೧೯೫೫ರಿಂದ ಪರಪಾಲನೆ ಮಾಡುತ್ತಾ ಬಂದಿರುತ್ತೇವೆ. ಅಂದು ಉಪಯೋಗಿಸುತ್ತಿದ್ದ ಲಸಿಕೆ.

ಮೇಕೆಯ ಗುಲ್ಮದಿಂದ ತಯಾರಿಸಿದ ಚುಚ್ಚುಮದ್ದನ್ನು ಉಪಯೋಗಿಸುತ್ತಿದ್ದರು. ಈ ಚುಚ್ಚುಮದ್ದು ನಾಟಿ ತಳಗಳಿಗೆ ಮಾತ್ರ ಉಪಯೋಗಿಸಲು ಯೋಗ್ಯವಾದದ್ದು. ಗಬ್ಬದ ಎಮ್ಮೆ, ಕುರಿ, ಮೇಕೆ ಮತ್ತು ಹಂದಿಗಳಿಗೆ ನಿಷೇಧಿಸಲಾಗಿತ್ತು. ಕಾರಣ ಈ ಲಸಿಕೆಯನ್ನು ಮೇಲ್ಕಂಡ ಪ್ರಾಣಿಗಳು ತಡೆಯಲಾಗುತ್ತಿರಲಿಲ್ಲ ಹಾಗೂ ಚುಚ್ಚುಮದ್ದು ಹಾಕಿದರೆ ರೋಗವು ಕಾಣಿಸಿಕೊಳ್ಳುತ್ತಿತ್ತು. ಇದಕ್ಕಿಂತಲೂ ಮಿಗಿಲಾಗಿ ರಾಜ್ಯದಲ್ಲಿರತಕ್ಕ ವಿದೇಶಿತಳಿಗಳು ಹಾಗೂ ಮಿಶ್ರತಳಿಗಳಿಗೆ ವಿಪರೀತ ಪ್ರತಿಕ್ರಿಯೆ ಕಂಡು ಬಂದು ಮರಣ ಸಂಭವಿಸಿದ್ದೂ ಉಂಟು. ನಂತರ Lapinised Vaccine, Lapinised Avianised Vaccine. Lapinised Reactor Vaccine.

ಅಂದರೆ, ಮೊಲ ಹಾಗೂ ಕೋಳಿ ಮೊಟ್ಟೆ ಮಾಂಸಾಂತರ ತಯಾರಿಸಿದ ಲಸಿಕೆ ಹಾಗೂ ಮೊಲದಲ್ಲಿ ಪ್ರತಿಕ್ರಿಯೆ ಹೊಂದಿದ ರಕ್ತವನ್ನು ಉಪಯೋಗಿಸಿದ್ದು ಉಂಟು. ಇಂತಹ ವಿವಿಧ ಲಸಿಕೆಗಳು ವಿದೇಶಿ ತಳಿ ಹಾಗೂ ಮಿಶ್ರತಳಿ ರಾಸುಗಳಿಗೆ ಗುಣ ಕಂಡು ಬರಲಿಲ್ಲ ಹಾಗೂ ರೋಗ ತಡೆಗಟ್ಟುವ ಪ್ರಯತ್ನಗಳು ವಿಫಲವಾದವು. ಕೊನೆಗೆ ಆಫ್ರಿಕಾ ಸಂಶೋಧನಾ ಸಂಸ್ಥೆಯವರು ತಯಾರು ಮಾಡಿದ Rinderpest Tissue Culture Vaccine (ಆಧುನಿಕ ರೀತಿಯ ಸಂಶೋಧನಾ ಕೇಂದ್ರಗಳಲ್ಲಿ ತಯಾರು ಮಾಡಿದ ಅನ್ನು ಎಲ್ಲಾ ರಾಸುಗಳಿಗೂ ಉಪಯೋಗಿಸುವ ಪದ್ಧತಿಯನ್ನು ಕೇಂದ್ರ ಸರ್ಕಾರದ ಆದೇಶದ ಮೇರೆಗೆ ಉಪಯೋಗಿಸಲಾಗಿದ್ದು, ಶೇ. ೯೦ರಷ್ಟು ರಾಸುಗಳು ಈ ರೋಗ ಬಾರದಂತೆ ಪ್ರತಿರೋಧಕ ಶಕ್ತಿಯನ್ನು ಉಂಟು ಮಾಡಲಾಯಿತು.

ದೊಡ್ಡ ರೋಗವನ್ನು ಸಂಪೂರ್ಣ ನಿರ್ಮೂಲನಾ ಮಾಡಲು ಇರುವ ಅಡ್ಡಿ ಆತಂಕಗಳು. —

೧) ಜಾನುವಾರು ಪಾಲಕರು ಇನ್ನೂ ಕೆಲವು ತಪ್ಪು ಭಾವನೆಯಿಂದ ಚುಚ್ಚುಮದ್ದು ಹಾಕಿಸುವುದಿಲ್ಲ.

೨) ಗಬ್ಬದ ರಾಸುಗಳಿಗೆ ಚುಚ್ಚುಮದ್ದು ಹಾಕಿದರೆ, ಕಂದು ಹಾಕುತ್ತದೆ ಎಂಬ ಭಯ.

೩) ಹೆಚ್ಚು ಹಾಲು ಕೊಡುವ ರಾಸುಗಳಿಗೆ ಇದರಿಂದ ಹಾಲು ಇಂಗಿ ಹೋಗುವದೆಂಬ ದಿಗಿಲು.

೪) ರೈತರು ಕೆಲವು ರಾಸುಗಳ ರೋಗ ಕಂಡು ಹಾಗೂ ರಾಸುಗಳು ಸತ್ತ ನಂತರ, ಚುಚ್ಚುಮದ್ದಿನ ಅವಶ್ಯಕತೆಯನ್ನು ಅರಿತು ಕೊಳ್ಳುವ ಒಂದು ಪರಿಪಾಠ.

೫) ಮೇಲ್ಕಂಡ ಕೆಲವು ತಪ್ಪು ಅಭಿಪ್ರಾಯಗಳಿಂದಲೂ ಹಾಗೂ ರೋಗ ಕಂಡ ನಂತರ ಚುಚ್ಚುಮದ್ದು ಹಾಕಿಸಿದರೂ, ಕೆಲವು ರಾಸುಗಳಿಗೆ ೨೧ ದಿವಸಗಳೊಳಗಾಗಿ ರೋಗ ಕಂಡು ಬರುವುದು ಉಂಟು. ಇದರಿಂದಾಗಿ ಚುಚ್ಚುಮದ್ದು ಹಾಕಿಸಿದರೂ, ರೋಗ ಬರುವುದೆಂಬ ಶಂಕೆ.

೬) ಇಂತಹ ಸಾಂಕ್ರಾಮಿಕ ರೋಗ ಹರಡಿರುವ ಸಮಯದಲ್ಲಿ, ಈ ಖಾಯಿಲೆಗೆ ತುತ್ತಾಗಿರುವ ರಾಸುಗಳನ್ನು ಹಾಗೂ ಕುರಿ, ಮೇಕೆ ಮುಂತಾದುವುಗಳನ್ನು ಬೇರೆಯವರಿಗೆ ಮತ್ತು ಕಟುಕರಿಗೆ ಕಡಿಮೆ ಬೆಲೆಗೆ ಸಾಗು ಹಾಕುವುದರಿಂದ, ಈ ರೋಗ ಅತಿ ತೀವ್ರ ರೀತಿಯಲ್ಲಿ ಪ್ರಸಾರವಾಗುವುದುಂಟು

೭) ಸಾಧಾರಣವಾಗಿ ಅಂಟುಜಾಡ್ಯ ಕಂಡಕೂಡಲೇ ಅಂತಹ ಪ್ರಾಣಿಗಳನ್ನು ಪ್ರತ್ಯೇಕವಾಗಿದ್ದು ಸುಶ್ರೂಷೆ ಮಾಡುತ್ತಿರಲಿಲ್ಲ. ಇದರಿಂದಾಗಿ ರೈತನ ಎಲ್ಲಾ ಪ್ರಾಣಿಗಳಿಗೂ ರೋಗ ತಗುಲಿದ ಪ್ರಾಣಿಯು ಎಂಜಲು, ಮೇವು ಮಲಮೂತ್ರಗಳಿಂದ ಇತರ ಪ್ರಾಣಿಗಳಿಗೆ ಹರಡಿ, ಆವನು ಎಲ್ಲಾ ರಾಸುಗಳನ್ನು ಕಳೆದುಕೊಳ್ಳುವುದಲ್ಲದೆ, ಈ ಖಾಯಿಲೆ ರಾಸುಗಳನ್ನು ಮೇಯಲು ಹೊರಗಟ್ಟಿ, ಊರಿನವರ ಇತರ ಪ್ರಾಣಿಗಳಿಗೂ ರೋಗ ಹರಡುವ ಸಾಧ್ಯತೆ ಇದೆ.

೮) ಇವೂ ಅಲ್ಲದೆ, ಸತ್ತ ಪ್ರಾಣಿಗಳ ಚಕ್ಕಳದ ಹಣಕ್ಕಾಗಿ ಊರ ಹೊರಗೆ ಚರ್ಮ ಸಂಲಿದ, ಉಳಿದ ದೇಹವನ್ನು ಹದ್ದು, ನಾಯಿ, ನರಿಗಳಿಗೆ ಬಿಡುವುದರಿಂದ, ಗ್ರಾಮದ ವಾತಾವರಣ ಕೆಡುವುದಲ್ಲದೆ, ರೋಗ ಹರಡಲು ಕಾರಣವಾಗುತ್ತದೆ. ಇಂತಹ ಸನ್ನಿವೇಶಗಳಲ್ಲಿ, ಈ ದೊಡ್ಡ ರೋಗವು ಇತಿಹಾಸದಲ್ಲೇ ಅತಿ ಪಳೆಯದಾದ ಅತಿ ತೀವ್ರತೆಯ ಸಾಂಕ್ರಾಮಿಕ ರೋಗವೆಂದು ಪರಿಗಣಿಸಲಾಗಿದೆ.

ನಿವಾರಣಾ ಕ್ರಮಗಳು,—

೧) ಪ್ರಪಂಚದಲ್ಲೇ ಈ ರೋಗದಿಂದ ಎಷ್ಟೋ ರಾಸುಗಳು ತುತ್ತಾಗುತ್ತಿದ್ದವು. ಇದರಿಂದಾಗಿ, ಪಶುವೈದ್ಯರ ಅಸ್ತಿತ್ವಕ್ಕೆ ಕಾರಣವಾಯಿತು.

೨) ಹಾಗೂ ಫ್ರಾನ್ಸ್ ದೇಶದ ALFORT ಎಂಬ ಸ್ಥಳದಲ್ಲಿ ಮೊದಲನೆಯ ಪಶುವೈದ್ಯ ಶಾಲೆ ಪ್ರಾರಂಭವಾಯಿತು. ಹಾಗೆಯೇ ಭಾರತದಲ್ಲಿ ೧೯ನೇ ಶತಮಾನದ ಕೊನೆ ಭಾಗದಲ್ಲಿ ಬ್ರಿಟಿಷ್ ವಿಜ್ಞಾನಿಗಳು ಪೂನಾ ಪಟ್ಟಣದಲ್ಲಿ ಮೇಕೆಯ ರಕ್ತದ ಮೂಲಕ ದೊಡ್ಡ ರೋಗ ಲಸಿಕೆಯನ್ನು ತಯಾರು ಮಾಡಿದರು, ಆಂದಿನ ಪರಿಸ್ಥಿತಿಯಲ್ಲಿ ಆಂಗ್ಲ ವಿಜ್ಞಾನಿಗಳು ಮೇಕೆಯ ರಕ್ತವನ್ನು ತೆಗೆಯುವ ಕ್ರಮವನ್ನು ವೀಕ್ಷಕರು ತಪಯಲಾರದೆ, ಆ ಸಂಸ್ಥೆ ಇರದಂತೆ ಮಾಡಿದ್ದೂ ಉಂಟು. ಕೊನೆಗೆ ಆದೇ ವಿಜ್ಞಾನಿಯು ಹಿಮಾಲಯದ ಶ್ರೇಣಿಗಳಲ್ಲಿ ಸೂಕ್ತವಾದ ಒಂದು ಸ್ಥಳ ಆಂದರೆ ಮಂಕ್ತೇಶ್ವರ ಎಂಬ ಸ್ಥಳದಲ್ಲಿ ಈ ಸಂಸ್ಥೆಯನ್ನು ಪುನರಾರಂಬಿಸಿದನು.

೩) ೧೯೨೬ರಲ್ಲಿ ಬೆಂಗಳೂರಿನಲ್ಲಿ ದೊಡ್ಡ ರೋಗೆ ತಡೆಗಟ್ಟುವ ಈ ಕಾರ್ಯಕ್ರಮವನ್ನು ಪ್ರಾರಂಭ ಮಾಡಲಾಯಿತು. ಆದೇ ಆಂದಿನ ಮೈಸೂರು ಸೀರಂ ಇನ್‌ಸ್ಟಿಟ್ಯೂಟ್ (Mysore Serum Institute.

೪) ಇಂದಿನ ಇನ್‌ಸ್ಟಿಟ್ಯೂಟ್ ಆಫ್ ಅನಿಮಲ್ ಹೆಲ್ತ್ ಅಂಡ್ ವೆಟರ್ನರಿ ಬಯಲಾಜಿಕಲ್ Institute of Animal Health & Veterinary Biologicals ಎಂಬ ಸಂಸ್ಥೆಯಲ್ಲಿ ದೊಡ್ಡ ರೋಗಕ್ಕೆ ಬೇಕಾಗುವ ಚುಚ್ಚುಮದ್ದನ್ನು ಸ್ವಲ್ಪ ಪ್ರಮಾಣದಲ್ಲಿ ತಯಾರು ಮಾಡುತ್ತಲಿದ್ದಾರೆ. ರಾಜ್ಯಕ್ಕೆ ಬೇಕಾಗುವ ಲಸಿಕೆಯನ್ನು ಐಜೆತ್ ನಗರ ಲೂಧಿಯಾನ, ರಾಣೆಪೇಟೆ, ಹಿಸ್ಸಾರ್ ಮುಂತಾದೆಡೆಗಳಿಂದ ತರಿಸಲಾಗುತ್ತಿದೆ.

೫) ಈ ಲಸಿಕೆಗೆ ಮುಂಗಡವಾಗಿ ಹಣ ತೆತ್ತರೂ, ಸಾಕಷ್ಟು ಸಿಗದಿರುವುದು ನಮ್ಮ ಮುಂದಿರತಕ್ಕ ಒಂದು ಸಮಸ್ಯೆ.

ಕುರಿಗಳಲ್ಲಿ ರೋಗ ಉಲ್ಬಣವಾಗಿ ಸಾಯುತ್ತಿರುವ ಬಗ್ಗೆ ವಿವರಗಳು,—

೧) ಮೇಲೆ ಹೇಳಿದಂತೆ, ಮುಖ್ಯವಾಗಿ ಕುರಿ, ಮೇಕೆ ಮತ್ತು ಹಂದಿಗಳಲ್ಲಿ ಈ ರೋಗ ಕಂಡು ಬಂದಿದ್ದರೂ, ಸಾಕಷ್ಟು ಚುಚ್ಚುಮದ್ದು ಇಲ್ಲದಿದ್ದ ಕಾರಣ, ಮೊದಲು ಲಸಿಕೆ ಹಾಕುತ್ತಿರಲಿಲ್ಲ. R P Tissue Culture Vaccine ಬಳಕೆಗೆ ಬಂದ ನಂತರ ಸಾಕಷ್ಟು ರಾಸುಗಳಿಗೆ ಪ್ರಯೋಗ ಮಾಡಲಾಯಿತು. ಆದರೆ, ನೆರೆ ರಾಜ್ಯಗಳಿಂದ ಆಂದರೆ, ತಮಿಳುನಾಡು, ಆಂಧ್ರ, ಮಹಾರಾಷ್ಟ್ರದವರ ಕುರಿ, ಮೇಕೆಗಳ ಮಾರಾಟಕ್ಕೆ ಕರ್ನಾಟಕ ರಾಜ್ಯಕ್ಕೆ ತರುವುದರಿಂದ, ಖಾಯಿಲೆ ಆಗಿರುವ ಪ್ರಾಣಿಗಳ ಮಂಖಾಂತರ ಈ ರೋಗ ಹರಡುತ್ತಲಿದೆ.

೨) ಚುಚ್ಚುಮದ್ದಿನ ಅಭಾವದಿಂದ ಆಂಧ್ರ ಪ್ರದೇಶದವರು ಲಸಿಕೆ ಆಗುತ್ತಿಲ್ಲವೆಂದು ತಿಳಿದು ಬಂದಿದೆ ಖಾಯಿಲೆ ಬಂದಾಗ ಭಯಭೀತರಾಗಿ ಅತಿ ಕಡಿಮೆ ಬೆಲೆಗೆ ಮಾರಿದ್ದು ಉಂಟು ಹಾಗೂ ಖಾಯಿಲೆ ರಾಸುಗಳನ್ನು ಸ್ಥಳಾಂತರಿಸಿದ್ದೂ ಉಂಟು ಹೆಚ್ಚಾಗಿ ಕುರಿಗಳು ಸತ್ತಾಗ ಅವುಗಳನ್ನು ಸರಿ

ಯಾಗಿ ಹೂಳೆದೆ, ರೋಗ ಪ್ರಸಾರವಾಗಲು ಕಾರಣವಾಗಿದ್ದ ಉಂಟು ಮತ್ತು ಸತ್ತ ಪ್ರಾಣಿಗಳನ್ನು ತಿನ್ನಲು ನಾಯಿ ನರಿಗಳು ಮತ್ತು ರಣ ಹದ್ದುಗಳು ಪೈಪೋಟಿಯಿಂದ ವಾತಾವರಣ ಕಲುಷಿತವಾಗಿದ್ದು ಉಂಟು. ಇಂತಹ ಕಷ್ಟನಷ್ಟಗಳು ಕುರಿ ಮತ್ತು ಮೇಕೆಗಳಲ್ಲಿ ಹೆಚ್ಚಾಗಿ ಬಳ್ಳಾರಿ, ಧಾರವಾಡ, ರಾಯಚೂರು ಜಿಲ್ಲೆಗಳಲ್ಲಿ ಕಲವಾರ ತಿಂಗಳುಗಳೀಂದ ಕಂಡು ಬರುತ್ತಿದೆ.

ರೋಗ ಹರಡಲು ಕಾರಣಗಳು.—

ಬಳ್ಳಾರಿ ಜಿಲ್ಲೆ.—

ಈ ಜಿಲ್ಲೆಯ ಆಂಧ್ರಪ್ರದೇಶದ ಪಕ್ಕದ ಗ್ರಾಮಗಳಾದ ಜೆ. ಹೊಸ ಹಳ್ಳಿ ಮತ್ತು ಗುಳ್ಳಂನಲ್ಲಿ ಈ ರೋಗವು ೨೬-೧೨ ೧೯೮೦ರಲ್ಲಿ ಕಾಣಿಸಿಕೊಂಡಿತು.

ಕರ್ನಾಟಕದ ಕೆಲವು ಕುರಿಪಾಲಕರು ಆಂಧ್ರಪ್ರದೇಶದ ಹಳ್ಳಿಗಳಿಗೆ ಕುರಿಗಳನ್ನು ಮೇಯಿಸಲು ಹೋಗಿದ್ದಾರೆ, ಈ ಕುರಿಗಳಿಗೆ ರೋಗ ಅಂಟಿತು. ಆಗ ಖಾಯಿಲೆ ಕಂಡ ರಾಸುಗಳನ್ನು ಇವರುಗಳು ಬಸ್ಸುಗಳಲ್ಲಿಯೂ ಹಾಗೂ ಬಸ್ಸುಗಳ ಮೇಲೂ ಹಾಕಿಕೊಂಡು ಮತ್ತು ನಡಸಿಕೊಂಡು ಬಂದು, ಈ ರೋಗದ ಕುರಿಗಳನ್ನು ಕಟುಕರಿಗೆ ಮತ್ತು ಇತರರಿಗೆ ಮಾರಿದರು. ಇದರಿಂದಾಗಿ, ರೋಗ ಬಳ್ಳಾರಿ, ಹಗರಿಬೊಮ್ಮನಹಳ್ಳಿ ಹೊಸಪೇಟೆ, ಸಿರುಗುಪ್ಪ, ಹಡಗಲಿ, ಸಿಂಧನೂರು ಮತ್ತು ಕೂಡ್ಲಿಗಿ ತಾಲ್ಲೂಕುಗಳಲ್ಲಿ ಹೆಚ್ಚಿತು ಹಾಗೂ ಮಹಾರಾಷ್ಟ್ರ ರಾಜ್ಯದಿಂದ ಕೊಲ್ಲಾಪುರ ಜಿಲ್ಲೆಯ ಕುರಿಗಾರರು ಮೊದಲಿ ನಿಂದಲೂ, ನೀರು ಮತ್ತು ಮೇವಿಗಾಗಿ ಮಹಾರಾಷ್ಟ್ರ ಗಡಿಯಿಂದ ಬೆಂಗಳೂರು ಹೆದ್ದಾರಿಯ ಮೇಲೆ, ಬೆಳಗಾಂ, ಧಾರವಾಡ, ಚಿತ್ರದುರ್ಗ, ಬಳ್ಳಾರಿ ಮಾರ್ಗವಾಗಿ ಅನಂತಪುರ ಜಿಲ್ಲೆಯವರೆಗೂ ಹೋಗುವ ವಾಡಿಕೆ ಉಂಟು. ಅಲ್ಲದೆ ಕುರಿಗಳು ಹೆಚ್ಚು ಮಳೆಗೆ ತುಳಲಾಗದ ಪ್ರಾಣಿಗಳಾದ್ದರಿಂದ, ಆ ಭಾಗದಲ್ಲಿ ಮಳೆ ಹೆಚ್ಚಾಗಿ ಬರುವ ಸಂದರ್ಭದಲ್ಲಿ ಕಡಿಮೆ ಮಳೆ ಬೀಳುವ ಬಯಲು ಸೀಮೆಗೆ ಬಂದು, ಮಳೆಗಾಲ ಮುಗಿದ ಮೇಲೆ ವಾಪಸ್ಸಾಗುವುದು ವಾಡಿಕೆ. ಇವರಿಗೆ ಯಾವ ಹತೋಟಿ ಇಲ್ಲದ ಸಂಚಾರದ ಪರಿಹಾರ. ಇವರು ರೈತರ ಜಮೀನಿನಲ್ಲಿ ರಾತ್ರಿ ವೇಳೆಯಲ್ಲಿ ಬಿಡಾರ ಬಿಡುವುದರಿಂದ, ಈ ಕುರಿಗಳ ಮಲಮೂತ್ರ ಗಳು ಉಪಯುಕ್ತವಾದ ಗೊಬ್ಬರವಾಗುವುದರಿಂದ ಜಮೀನಿನ ಮಾಲೀಕರು ಇವರನ್ನು ಬರ ಮಾಡಿ ಕೊಂಡು ಅವರಿಗೆ ಊಟ ಮತ್ತು ಹಣವನ್ನು ಕೊಡುವುದು ಉಂಟು.ಹೀಗಾಗಿ ಯಾರ ಸುಬರ್ದಿನಲ್ಲಿಯೇ ಇವರು ಸಿಗುವುದಿಲ್ಲ. ಹೀಗೆ ವರ್ಷಾನುಗಟ್ಟಲೆ ಸ್ಥಳಾಂತರಿಸುವ ಇವರ ಹವ್ಯಾಸ. ಇಂತಹ ಹತೋಟಿ ಇಲ್ಲದ ಪದ್ಧತಿಗಳಿಂದ, ಖಾಯಿಲೆ ಕುರಿಗಳನ್ನು ಸಾಗಿಸುವುದರಿಂದ. ಅವರ ಕುರಿಗಳು ಸತ್ತು ನಷ್ಟವಾಗು ವುದಲ್ಲದೆ ಬೇರೆ ಕುರಿ ಪೋಷಕರ ರಾಸುಗಳು ರೋಗಕ್ಕೆ ತುತ್ತಾಗುವುದು ಉಂಟು. ಇಂತಹ ಆಲೆಮಾರಿ ತನದ ಕುರಿಗಳಿಂದ ಸಾಕಷ್ಟು ರೋಗಗಳು ಹರಡುತ್ತದೆ.

ಈ ಆಲೆಮಾರಿ ಕುರಿಪೋಷಕರ ಕುರಿಗಳೂ ಊರಿನ ಜಾನುವಾರುಗಳ ಸಂಪರ್ಕವಿಲ್ಲದಿರುವ ಕಾರಣ ಹೆಚ್ಚಾಗಿ ಆಯಾ ಹಳ್ಳಿಗಳ ಕುರಿ ಮೇಕೆಗಳಿಗೆ ಮಾತ್ರ ದೊಡ್ಡ ರೋಗ ಕಂಡು ಬಂದಿದ್ದು, ಬೇರೆ ವನ ಎಮ್ಮೆಗಳಿಗೆ ಈ ರೋಗ ಈವರೆವಿಗೆ ಕಂಡು ಬಂದಿಲ್ಲ.

ಈ ಕೆಳಕಂಡ ಕುರಿ ಸಂತೆಗಳಿಂದ ಖಾಯಿಲೆ ಹರಡುವ ಸಾಧ್ಯತೆ ಉಂಟಾಯಿತು.—

೧) ವಾರ ವಾರ ನಡೆಯುವ ಪರಿಹರದ ಕುರಿಗಳ ಸಂತೆ: ಇಲ್ಲಿಂದ ಬಳ್ಳಾರಿ ಜಿಲ್ಲೆಯ ಹರಪನ ಹಳ್ಳಿಗೆ ಖಾಯಿಲೆ ಕುರಿಗಳನ್ನು ಹುಲಿಕಟ್ಟೆ ಗ್ರಾಮಕ್ಕೆ ರೋಗ ಬಂದದ್ದು ಮೊದಲನೆಯ ವರದಿ.

೨) ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿನ ಕುರಿ ಸಂತೆಯಿಂದ ಪಡ್ಡು ಗ್ರಾಮಕ್ಕೆ ಪರ ಡಿದ್ದು ಎರಡನೆಯ ವರದಿ.

೩) ಆಂಧ್ರಪ್ರದೇಶದ ಹಳ್ಳಿಗಳಾದ ಜೆ. ಹೊಳಿಹಳ್ಳಿ ಮಂತ್ರಾಲಯ ಬಳ್ಳಾರಿ ತಾಲ್ಲೂಕಿನಲ್ಲಿ ರೋಗ ಪರಡಿದ್ದು ಮೂರನೆಯದು ಹಾಗೂ ಹಗರಿಬೊಮ್ಮನಹಳ್ಳಿ ಮತ್ತು ಹೊಸಪೇಟೆ ತಾಲ್ಲೂಕುಗಳಲ್ಲಿ ಪರಡಿತು.

ಇಲಾಖೆಯು ತೆಗೆದುಕೊಂಡ ಕಾರ್ಯಕ್ರಮಗಳು.—

೧) ೨೬-೧೨-೧೯೮೦ರಲ್ಲಿ ಈ ರೋಗವನ್ನು ದೊಡ್ಡ ರೋಗವೆಂದು ಪತ್ತೆ ಹಚ್ಚಿದ ನಂತರ ಇಲಾಖಾ ಮೇಲಾಧಿಕಾರಿಗಳಿಗೆ ತಂತಿ ಮೂಲಕ ಬಳ್ಳಾರಿ ಪಶುವೈದ್ಯಾಧಿಕಾರಿಗಳು ವಿಷಯ ತಿಳಿಸಲಾಯಿತು.

೨) ಸ್ಥಳೀಯ ಪಶುವೈದ್ಯ ಸಿಬ್ಬಂದಿಯವರನ್ನು ಹಗರಿ ನದಿಯ ಪಶ್ಚಿಮ ದಂಡೆಯ ಹಳ್ಳಿಗಳ ಕುರಿ, ಮೇಕೆ, ದನಗಳಿಗೆ ಚುಚ್ಚುಮದ್ದು ಹಾಕಲು ಪ್ರಾರಂಭ ಮಾಡಿದರು.

೩) ಈ ಚುಚ್ಚುಮದ್ದು ಹಾಕುವ ಮೊದಲೇ ಪತ್ರಿಕೆಗಳಲ್ಲಿ ರೋಗ ನಿಯಂತ್ರಣದ ಬಗ್ಗೆ ಪ್ರಚಾರ ಪಡಿಸಿದರು.

೪) ಬಾನುಲಿ (AIR) ಮುಖಾಂತರ ರೋಗದ ಬಗ್ಗೆ ಮಾಹಿತಿ ಕೊಡಲಾಯಿತು. ಬಳ್ಳಾರಿ ಜಿಲ್ಲಾಧಿಕಾರಿಗಳ ಮುಖಾಂತರ ಕುರಿ ಸಂತೆಗಳನ್ನು ನಿಷೇಧಿಸಲಾಯಿತು. ಬಸ್ಸುಗಳಲ್ಲಿ ಹಾಗೂ ಬಸ್ಸುಗಳ ಮೇಲೂ ಖಾಯಿಲೆ ಕುರಿಗಳನ್ನು ಸಾಗಿಸುವುದನ್ನು ತಡೆಯಲು ಕರ್ನಾಟಕ ರಾಜ್ಯ ರಸೆಸಾರಿಗೆ ಸಂಸ್ಥೆ ಮತ್ತು ಉಳಿದ ವಾಹನಗಳ ಮಾಲೀಕರಿಗೆ ತಿಳಿಸಲಾಯಿತು.

ಆಂಧ್ರಪ್ರದೇಶ ಜಂಟಿ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಮತ್ತು ಬರಮಾಡಿಕೊಂಡು, ಪರಸ್ಪರ ವಿಚಾರ ವಿನಿಮಯ ಮಾಡಲಾಯಿತು.

ಪಶುಪಾಲನಾ ನಿರ್ದೇಶಕರು ಹಾಗೂ ಪಶು ಆರೋಗ್ಯವು ಲಸಿಕೆ ತಯಾರಿಕೆ ಸಂಸ್ಥೆಯ ನಿರ್ದೇಶಕರು ಜಂಟಿ ಪ್ರವಾಸ ಕೈಕೊಂಡು ಸ್ಥಳೀಯ ಅಧಿಕಾರಿಗಳೊಂದಿಗೆ ಕೆಲವಾರು ಹಳ್ಳಿಗಳಿಗೆ ಭೇಟಿ ಮಾಡಿ ಕೈಕೊಂಡ ಕಾರ್ಯಕ್ರಮಗಳ ಪರಿಶೀಲನೆ ಮಾಡಿದರು ಹಾಗೂ ಆಂಧ್ರಪ್ರದೇಶದ ದೊಡ್ಡ ರೋಗ ನಿವಾರಣಾ ಅಧಿಕಾರಿಗಳು ಮತ್ತು ಸಿಬ್ಬಂಧಿ ವರ್ಗದವರೊಡನೆ ಹತೋಟಿಯ ಬಗ್ಗೆ ವಿಚಾರ ವಿನಿಮಯ ಮಾಡಿದರು. ಆಹಲ್‌ವರೆವಿಗೂ, ಈ ಕೆಳಕಂಡ ಪ್ರಾಣಿಗಳಿಗೆ ಚುಚ್ಚುಮದ್ದು ಹಾಕಲಾಗಿತ್ತು.

೧) ಕುರಿ ಮತ್ತು ಮೇಕೆ	...	೬೭,೮೪೩
೨) ದನ	...	೩೨,೩೭೭
ಒಟ್ಟು	...	೧,೦೦,೨೨೦

ಪಶುಪಾಲನಾ ನಿರ್ದೇಶಕರು ಧಾರವಾಡ ಜಿಲ್ಲೆಯ ಭೇಟಿ ಸಮಯದಲ್ಲಿ ದೇವರಗುಡ್ಡ ಎಂಬ ಹಳ್ಳಿಗೆ ಭೇಟಿಕೊಟ್ಟು ಅಲ್ಲಿಯ ವಿವರಗಳನ್ನು ಪರಿಶೀಲಿಸಿದರು. ಅಲ್ಲದೆ, ಧಾರವಾಡ ಜಿಲ್ಲೆ ಪಶುವೈದ್ಯಾಧಿಕಾರಿಗಳೊಂದಿಗೆ ಉಳಿದ ಮೂರು ಹಳ್ಳಿಗಳ ವಿವರಗಳನ್ನು ಅರಿತುಕೊಂಡರು. ರೋಗ ಕಾಣಿಸಿಕೊಂಡಿದು ನಾಲ್ಕು ಹಳ್ಳಿಗಳಲ್ಲಿ, ಆದರೆ ಚುಚ್ಚುಮದ್ದು ಅಕ್ಕಪಕ್ಕದ ಗ್ರಾಮಗಳಲ್ಲಿಯೂ ಹಾಕಲಾಗಿದೆ.

ರಾಣೆಬೆನ್ನೂರು ತಾಲ್ಲೂಕು (ಕುರಿ ಮತ್ತು ಮೇಕೆ)	...	೩೭,೬೬೦
ಓರೇಕೆರೂರು	...	೧೭,೭೨೭
ಒಟ್ಟು	...	೫೫ ೩೮೭

ನಂತರ ಪಶು ಸಂಗೋಪನಾ ವಿಶೇಷ ಕಾರ್ಯದರ್ಶಿಗಳು ಮತ್ತು ನಿರ್ದೇಶಕರು ಒಟ್ಟಿಗೆ ಸೇರಿ ಸವದತ್ತಿ, ರಾಮದುರ್ಗ, ಮುಧೋಳ. ಜಮಖಂಡಿ, ವಿಜಾಪುರ, ಅಥಣಿ, ಚಿಕ್ಕೋಡಿ, ಬೆಳಗಾಂ, ಧಾರವಾಡ, ಹಾವೇರಿ, ರಾಣೆಬೆನ್ನೂರು ಭಾಗಗಳಲ್ಲಿ ಸಂಚರಿಸಿ, ಕುರಿ ಹಿಂಡುಗಳ ಮಾಲೀಕರನ್ನು ಭೇಟಿ ಮಾಡಿ, ವಿವರಗಳನ್ನು ಅರಿತುಕೊಂಡರು. ಅಲ್ಲದೆ, ಮಹಾರಾಷ್ಟ್ರ, ಕರ್ನಾಟಕ ಗಡಿ ಪ್ರದೇಶ ಹಳ್ಳಿಗಳಾದ

ಕಾಗವಾಹಿ ಮತ್ತು ಸಂಕೇಶ್ವರಗಳಿಗೆ ಭೇಟಿ ಕೊಟ್ಟರು. ಚಿತ್ರದುರ್ಗದ ಪಶುವೈದ್ಯಾಧಿಕಾರಿಗಳೊಂದಿಗೆ ಸಮಾಲೋಚನೆ ಮಾಡಲಾಯಿತು. ಈ ಸಂಚಾರದಲ್ಲಿ ಸಾಕಷ್ಟುಕುರಿ ಹಿಂಡಿನವರೊಂದಿಗೆ ಮಾತನಾಡಿದಾಗ ಅವರು ಬಲಸೆ ಹೋಗುತ್ತಿರುವುದು ಕಂಡು ಬಂದಿತು, ರೋಗದ ಬಗ್ಗೆ ಯ ಸಾವಧರದಿಯ ತಿಳಿಸಲಿಲ್ಲ.

ಚಿತ್ರದುರ್ಗ ಜಿಲ್ಲೆಯಲ್ಲಿ ೧,,೨೦೬೫೮ ರಾಸುಗಳಿಗೆ ಚುಚ್ಚುಮದ್ದು ಹಾಕಲಾಯಿತು.

ನಾನು ಪಶುಸಂಗೋಪನಾ ವಿಶೇಷ ಕಾರ್ಯದರ್ಶಿಗಳೊಂದಿಗೆ ಬಳ್ಳಾರಿ ಜಿಲ್ಲೆಗೆ ಭೇಟಿ ಕೊಟ್ಟು ಅಲ್ಲಿನ ಅಧಿಕಾರಿಗಳೊಂದಿಗೆ ವಿಚಾರ ವಿನಿಮಯ ಮಾಡಲಾಯಿತು. ಹಾಗೂ ತೆಕ್ಕಲಕೋಟೆ, ಚಾಣಾಸೆ ಪುರ ಮತ್ತು ಸಿರಗುಪ್ಪಗಳಿಗೆ ಭೇಟಿ ಇತ್ತೆವು.

ಆಗ ಕೊಲ್ಲಾಪುರ ಜಿಲ್ಲಾ ಪರಿಷತ್ತಿನ ಪಶುವೈದ್ಯಾಧಿಕಾರಿಗಳಿಂದ ೭-೪-೧೯೮೧ರಲ್ಲಿ ಕಳುಹಿಸಿರುವ ಪತ್ರವನ್ನು ಪರಿಶೀಲಿಸಲಾಯಿತು. ಕೊಲ್ಲಾಪುರದಿಂದ, ಸಣ್ಣ ರೈತರ ಅಭಿವೃದ್ಧಿ ಸಂಸ್ಥೆಯ ಮುಖಾಂತರ ಬ್ಯಾಂಕಿನ ನೆರವಿನಿಂದ ಪಡೆದ ಕುರಿಗಳನ್ನು ಬಳ್ಳಾರಿ ಜಿಲ್ಲೆಗೆ ತಂದವುಗಳಿಗೆ ಬಾಯಿಲೆಗೆ ಚಿಕಿತ್ಸೆ ಮತ್ತು ಚುಚ್ಚುಮದ್ದುಗಳನ್ನು ಹಾಕಿ, ಮಾಹಿತಿ ತಿಳಿಸಬೇಕೆಂದು ಬರೆದಿದ್ದಾರೆ. ಅಂತಹ ಒಂದು ಸಾವಿರ ಕುರಿಗಳಿಗೆ ದೊಡ್ಡ ದೊಡ್ಡ ರೋಗದ ಚುಚ್ಚುಮದ್ದನ್ನು ಬಳ್ಳಾರಿಯ ಪಶುವೈದ್ಯಾಧಿಕಾರಿಗಳು ಹಾಕಿದ್ದಾರೆ.

ಸಿರುಗುಪ್ಪದಲ್ಲಿ ಚುಚ್ಚುಮದ್ದು ಹಾಕಿದ್ದ ಕಾರ್ಯಕ್ರಮವನ್ನು ಪರಿಶೀಲಿಸಲಾಯಿತು. ೪,೦೦೦ ರಾಸುಗಳಿಗೆ ಬೇಕಾಗುವ ಲಸಿಕೆ ಇತ್ತು. ಉಳಿದ ರಾಸುಗಳಿಗೆ ಉಪಯೋಗಿಸಲು ತಿಳಿಸಲಾಯಿತು. ರಸ್ತೆಯಲ್ಲಿ ಬಳ್ಳಾರಿಗೆ ಮರಳಿ ಬರುವಾಗ ಕೆಲವು ಹಿಂಡುಗಳ ಮಾಲೀಕರೊಂದಿಗೆ ರೋಗದ ಬಗ್ಗೆ ವಿಚಾರಿಸಲಾಯಿತು. ಜಾಣಾಪುರ ಮತ್ತು ಪಕ್ಕದ ಗ್ರಾಮಗಳಲ್ಲಿ ಬಾಯಿಲೆಯಿಂದ ನರಳಿ ಸತ್ತದ್ದು ಹಾಗೂ ಇನ್ನೂ ನರಳುತ್ತಿರುವ ಕುರಿಗಳು ಇರುವುದಾಗಿ ತಿಳಿಸಿದರು.

ಮತ್ತೊಂದು ಗಮನಾರ್ಹ ಸಂಗತಿ ಎಂದರೆ, ಎರಡು ಬಡಕಲ ಕುರಿಗಳನ್ನು ಪರೀಕ್ಷಿಸಿದಾಗ ಒಂದು ಕುರಿಯ ಬಾಯಿಯಲ್ಲಿ ರೋಗದ ಲಕ್ಷಣಗಳು ಕಂಡು ಬಂದುವು. ಮತ್ತೊಂದು ಕುರಿಯಲ್ಲಿ ಆಮಶಂಕೆ ತರಹ ಭೇದಿ ಕಂಡು ಬಂದಿತು. ಆದ್ದರಿಂದ ಚುಚ್ಚಮದ್ದು ಹಾಕದೆ ಇರತಕ್ಕ ಕುರಿಗಳಲ್ಲಿ ರೋಗ ಇರುವುದರಿಂದ ಎಲ್ಲಾ ರಾಸುಗಳಿಗೂ ಚುಚ್ಚುಮದ್ದನ್ನು ಹಾಕಬೇಕೆಂದು ತಿಳಿಸಲಾಯಿತು

ಕೆಲವು ಕಡೆಗಳಲ್ಲಿ ಬಾಯಿಲೆ ಕಂಡ ಹಿಂಡಿನಲ್ಲಿ ಚುಚ್ಚುಮದ್ದನ್ನು ಹಾಕಿದರೂ ಸಹ, ೨೧ ದಿವಸಗಳೊಳಗಾಗಿ ರೋಗ ಕಾಣಿಸಿಕೊಂಡಿದ್ದೂ ಉಂಟು. ಈ ಒಂದು ಭೀತಿಯಿಂದ, ಚುಚ್ಚುಮದ್ದು ಹಾಕಿದರೂ ರೋಗ ಬರುವುದೆಂಬ ತಪ್ಪು ಭಾವನೆಯು ಮೂಡಿದೆ ಮುಂಜಾಗ್ರತೆ ಕ್ರಮ ಕೈಕೊಂಡ ಕುರಿ ಹಿಂಡುಗಳಲ್ಲಿ ರೋಗ ಕಂಡು ಬಂದಿಲ್ಲ.

ಸಾಕಷ್ಟು ಲಸಿಕೆ ತರಲು ಮಾಡಿರುವ ವ್ಯವಸ್ಥೆಗಳು.—

೧) ಈ ಬಾಯಿಲೆಯ ಪ್ರತಿರೋಧಕ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಲಿದೆ. ಇದ ಕ್ಕೋಸ್ಕರವಾಗಿ ಲಸಿಕೆಯನ್ನು ಉತ್ತರ ಪ್ರದೇಶದ ಇಜಾತ್ ನಗರದಿಂದ ಮುಂಗಡವಾಗಿ ಹಣ ಕೊಟ್ಟು ವಿಮಾನದ ಮೂಲಕ ತರಿಸಲಾಗುತ್ತಲಿದೆ. ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಿನ ರೋಗ ಕಂಡು ಬಂದಿದ್ದರಿಂದ, ಭಾರತ ಸರ್ಕಾರದ ಪಶುಪಾಲನಾ ಕಮಿಷನರ್‌ರೊಂದಿಗೆ ದೂರವಾಣಿಯ ಮೂಲಕ, ಇಲ್ಲಿಯ ಪರಿಸ್ಥಿತಿಯನ್ನು ತಿಳಿಸಿ, ಕೂಡಲೆ ಸಾಕಷ್ಟು ಚುಚ್ಚುಮದ್ದನ್ನು ಇಜಾತ್‌ನಗರ ಮತ್ತು ಬೇರೆ ಸ್ಥಳಗಳಿಂದ ರವಾನಿಸಬೇಕೆಂದು ಕೋರಲಾಯಿತು.

೨ ಒಬ್ಬ ಅಧಿಕಾರಿಯು ವಿಮಾನದಲ್ಲಿ ಹೋಗಿ ಲಸಿಕೆಯನ್ನು ತರಲು ವಿಶೇಷ ಆದೇಶವನ್ನು ಕೊಡಲಾಯಿತು ಹಾಗೂ ಭಾರತೀಯ ಆಗ್ರೋ ಇಂಡಸ್ಟ್ರೀಸ್ ಫೌಂಡೇಷನ್‌ರೊಂದಿಗೆ ಟೆಲೆಕ್ಸ್ ಮುಖಾಂತರ ಲಸಿಕೆ ಕಳುಹಿಸಲು ಕೋರಲಾಯಿತು. ಕರ್ನಾಟಕ ಪಶು ರೋಗ ನಿಯಂತ್ರಣ ಕಾಯಿದೆಯ ಪ್ರಕಾರ ಅಧಿಸೂಚನೆ ನೀಡಲಾಗಿದೆ.

ನಾನೇ ದೆಹಲಿಗೆ ಧಾವಿಸಿ ಭಾರತ ಸರ್ಕಾರದ ಅಧಿಕಾರಿಗಳೊಂದಿಗೆ ಸಂಪರ್ಕ ಬೆಳೆಸಿ ತಯಾರಾಗುವ ಎಲ್ಲಾ ಸಂಸ್ಥೆಗಳಿಂದಲೂ ಸಾಕಷ್ಟು ಲಸಿಕೆಯನ್ನು ತರಿಸಲು ವ್ಯವಸ್ಥೆ ಮಾಡಿದ್ದೇನೆ. ಇದರಿಂದಾಗಿ

ಒಂದು ಲಕ್ಷ ಲಸಿಕೆ ಐಜಕ್ ನಗರದಿಂದ ತರಿಸಲಾಯಿತು ಮತ್ತು ಮಧ್ಯ ಪ್ರದೇಶದ ಮೋಪ್ ಸಂಸ್ಥೆಯಿಂದ ೫೦,೦೦೦ ಲಸಿಕೆ ಕಳುಹಿಸುತ್ತೇವೆಂದು ತಿಳಿಸಿದ್ದಾರೆ.

ರೋಗ ನಿಯಂತ್ರಣ ಕಾಯಿದೆ ಪ್ರಕಾರ ಈ ರೋಗಗಳಿಗೆ ಪರಿಹಾರ ಕೊಡಲು ಬರುವುದಿಲ್ಲ. ಆದ್ದರಿಂದ ನಾನು ಬಳ್ಳಾರಿ ಜಿಲ್ಲೆಯಲ್ಲಿ ಭೇಟಿ ಮಾಡಿದ ಕುರಿಗಾರರಿಗೆ ಚುಚ್ಚುಮದ್ದು ತಪ್ಪದೆ ಹಾಕಿಸಬೇಕೆಂತಲೂ, ಕುರಿಗಳಿಗೆ ಜೀವ ವಿಮೆ ಮಾಡಿಸಲು ತಿಳಿಸಿದೆನು. ಆದ್ದರಿಂದ, ಚುಚ್ಚುಮದ್ದು ಹಾಕಿದ ಕುರಿಗಳು ಸತ್ತರು ಪರಿಹಾರ ಸಿಗುವುದೆಂದು ತಿಳಿಸಲಾಯಿತು. ಈವರೆವಿಗೆ ಬಳ್ಳಾರಿ ಜಿಲ್ಲೆಯಲ್ಲಿ ೮೩,೦೪೪ ಕುರಿ ಮತ್ತು ಮೇಕೆಗಳಿಗೂ ಹಾಗೂ ೫೬,೬೧೩ ದನಗಳಿಗೂ ಒಟ್ಟು ೧,೩೯,೬೫೭ ರಾಸುಗಳಿಗೆ ಚುಚ್ಚುಮದ್ದನ್ನು ಹಾಕಲಾಗಿದೆ.

ಈಗ ಈ ರೋಗ ಪೂರ್ಣ ಹತೋಟಿಗೆ ತರಲು ಮುಂಜಾಗ್ರತೆ ಕ್ರಮಗಳು ಭರದಿಂದ ಸಾಗುತ್ತಲಿವೆ ಪ್ರಾಣಿಗಳ ಸಾಗಾಣಿಕೆಯನ್ನು ನಿಷೇಧಿಸಲಾಗಿದೆ. ರೈತರಿಗೆ, ಕುರಿ ಪಾಲಕರಿಗೆ ಗ್ರಾಮ ಮಟ್ಟಕ್ಕೆ ಹೋಗಿ ಕೊಡಬೇಕಾದ ತಿಳುವಳಿಕೆಯನ್ನು ಕೊಡಲಾಗಿದೆ. ಲಸಿಕೆ ಹಾಕುವಿಕೆ ಮುಂದುವರಿಯುತ್ತಿದೆ.

ಶ್ರೀ ಆಂದಾನಯ್ಯ. - ಮಾನ್ಯ ಅಧ್ಯಕ್ಷರೇ, ರೋಗವನ್ನು ತಡೆಗಟ್ಟಲು ಚುಚ್ಚುಮದ್ದನ್ನು ಇಲಾಖೆ ಮುಖಾಂತರ ಸರಬರಾಜು ಮಾಡಿ ಎಲ್ಲ ಕುರಿಗಳಿಗೂ ಮಂತು ದನಗಳಿಗೂ ಹಾಕಲಾಯಿತು, ಎಂದು ಮಾನ್ಯ ಸಚಿವರು ಹೇಳಿದರು. ಆದರೆ, ಚುಚ್ಚುಮದ್ದನ್ನು ಕೊಟ್ಟಮೇಲೂ ಸಾವಿರಾರು ಪಶುಗಳು ಮತ್ತು ಕುರಿಗಳು ಸತ್ತುಹೋಗಿವೆ. ಇದಕ್ಕೆ ಕಾರಣ, ಅವಧಿ ಮೀರಿದ್ದ ಚುಚ್ಚುಮದ್ದನ್ನು ನೀಡಿದ್ದು ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಬಂದಿದ್ದರೆ. ಅಂತಹ ಚುಚ್ಚುಮದ್ದನ್ನು ಸರಬರಾಜು ಮಾಡಿದ್ದಕ್ಕಾಗಿ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗಿದೆಯೇ ಎಂದು ಮಾನ್ಯ ಸಚಿವರು ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ.--ಮಾನ್ಯ ಅಧ್ಯಕ್ಷರೇ, ಸಾವಿರಾರು ಕುರಿಗಳು ಕಾಯಿಲೆ ಪರಿಣಾಮವಾಗಿ ಸತ್ತುಹೋಗಿರುವುದು ಸರ್ಕಾರದ ಗಮನಕ್ಕೆ ಬಂದಮೇಲೆ, ಆದರ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಕಾಯಿಲೆಯನ್ನು ನಿಯಂತ್ರಿಸಿದ್ದಾರೆ ಮತ್ತು ಹೆಚ್ಚು ಕಡಿಮೆ ಹರಡದ ಹಾಗೆ ಮಾಡಿದ್ದಾರೆ. ಅದಕ್ಕಾಗಿ ಅನೇಕ ಜನ ರೈತರು ಸರ್ಕಾರಕ್ಕೆ ತಮ್ಮ ಧನ್ಯವಾದಗಳನ್ನರ್ಪಿಸುವುದಕ್ಕೆ ಇಚ್ಛೆಪಡುತ್ತಾರೆ. ಈಗ ನಾನು ನಾಲ್ಕು ವಿಚಾರಗಳ ಬಗ್ಗೆ ಮಾತನಾಡಬಯಸುತ್ತೇನೆ. ಒಂದನೆಯದಾಗಿ ಲಸಿಕೆ ಸಕಾಲದಲ್ಲಿ ಸಿಗಲಿಲ್ಲ, ದುಡ್ಡು ಕೊಟ್ಟರೂ ಸಿಗಲಿಲ್ಲ, ವಿಮಾನದಲ್ಲಿ ಹೊರಗಡೆಯಿಂದ ತರಿಸಬೇಕಾಯಿತೆಂದು ಮಾನ್ಯ ಸಚಿವರು ಹೇಳಿದರು. ಹಾಗಾದರೆ, ನಮಗೆ ಎಷ್ಟು ಲಸಿಕೆಗಳು ಬೇಕೋ ಅಷ್ಟನ್ನು ನಮ್ಮ ರಾಜ್ಯದಲ್ಲೇ ಉತ್ಪಾದನೆ ಮಾಡುವುದಕ್ಕೆ ಏತಕ್ಕೆ ವ್ಯವಸ್ಥೆ ಮಾಡಬಾರದು ? ನಮ್ಮ ರಾಜ್ಯದಲ್ಲಿ ಲಕ್ಷಾಂತರ ರೂಪಾಯಿಗಳ ಪಶು ಸಂಪತ್ತಿದೆ. ಪ್ರತಿ ವರ್ಷ ಈ ಕಾಯಿಲೆ ಬಂದಾಗಲೆಲ್ಲ ಲಕ್ಷಾಂತರ ರೂಪಾಯಿಗಳನ್ನು ಕೊಟ್ಟು ಹೊರಗಡೆಯಿಂದ ಲಸಿಕೆಗಳನ್ನು ತರಿಸುವಷ್ಟರಲ್ಲಿ ರಾಜ್ಯದ ಬಹುಪಾಲು ಪಶು ಸಂಪತ್ತು ನಾಶವಾಗಿರುತ್ತದೆ. ಆದುದರಿಂದ, ಈಗ ರಾಜ್ಯದಲ್ಲಿರುವ ಲಸಿಕೆ ತಯಾರಿಕೆ ಕೇಂದ್ರದಲ್ಲಿ ಮತಿಹೆಚ್ಚಿಂದ ಯೂನಿಟ್‌ನ್ನು ಜಾಸ್ತಿ ಮಾಡಿ, ರಾಜ್ಯಕ್ಕೆ ಬೇಕಾದಷ್ಟು ಪ್ರಮಾಣದಲ್ಲಿ ಲಸಿಕೆಗಳನ್ನು ಉತ್ಪತ್ತಿ ಮಾಡಲು ತಕ್ಕ ಕ್ರಮ ಕೈಗೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಎರಡನೆಯದಾಗಿ, ಕುರಿಗಳಿಗೆ ಕಾಯಿಲೆ ಬಂದಿರುವುದು ಗೊತ್ತಾದ ಕೂಡಲೇ ಅದು ಬೇರೆ ಕಡೆಗೆ ಹರಡದಂತೆ ಮಾಡಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಯಿತೆಂದು ಮಾನ್ಯ ಸಚಿವರು ಹೇಳಿದ್ದಾರೆ. ಆದರೆ, ಕಾಯಿಲೆ ಬಂದ ಕುರಿಗಳನ್ನು, ಬಂದಷ್ಟು ದುಡ್ಡು ಬರಲೆಂದು, ಬೇರೆ ಕಡೆಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡುವುದು ಸ್ವಾಭಾವಿಕ. ಇದನ್ನು ತಪ್ಪಿಸಲು ಕಾಯಿಲೆ ಬಂದ ಕುರಿಗಳ ಸಾಗಾಣಿಕೆಯನ್ನು ನಿಷೇಧ ಮಾಡಿದ್ದೇವೆಂದು ಮಾನ್ಯ ಸಚಿವರು ಹೇಳಿದರು. ಕುರಿಗಳನ್ನು ಸಾಗಿಸಿ ಮಾರಬೇಡಿ ಎಂದರೆ ಅದನ್ನೇ ನಂಬಿರತಕ್ಕ ಬಡ ರೈತರು ಏನು ಮಾಡಬೇಕು ? ಒಂದು ವೇಳೆ ಕಾಯಿಲೆ ಬಿದ್ದ ಕುರಿಗಳು ಸತ್ತರೆ ಪರಿಹಾರ ಕೊಡುತ್ತೇವೆ ; ಭಯ ಪಡಬೇಡಿ ಎಂದು ರೈತರಿಗೆ ಖಾತರಿಪಡಿಸಿದರೆ ಆಗ ಅವರು ಕಾಯಿಲೆ ಬಿದ್ದ ಕುರಿಗಳನ್ನು ಮಾರಲು ಬೇರೆ ಕಡೆಗಳಿಗೆ ಹೋಗುವುದಿಲ್ಲ. ಆದರೆ, ಪರಿಹಾರ ಕೊಡದೆ ಕುರಿಗಳನ್ನು ಬೇರೆ ಕಡೆಗೆ ಸಾಗಿಸದಂತೆ ಇಪ್ಪತ್ತಾಲ್ಕು ಗಂಟೆ ಮಿಲಿಟರಿ ಇಟ್ಟು ಕಾಯುವುದಕ್ಕೆ ಆಗುತ್ತದೆಯೆ? ಶ್ರೀಮಂತರನ್ನು ಬಿಟ್ಟುಬಿಡಿ, ತೀರಾ ಬಡವರು, ಇದನ್ನೇ ನಂಬಿಕೊಂಡು ಜೀವನ ಮಾಡತಕ್ಕವರು ಮತ್ತು ಇದೇ ಆಧಾರವಾಗಿರತಕ್ಕವರಿಗೆ, ಕಾಯಿಲೆ ಬಂದು ಕುರಿಗಳು ಸತ್ತರೆ ಪರಿಹಾರ ಕೊಡುತ್ತೇವೆ, ಅವು

ಗಳನ್ನು ಮಾರಾಟ ಮಾಡಬೇಡಿ ಅಥವಾ ಬೇರೆ ಕಡೆಗೆ ಸಾಗಿಸಿ ಕಾಯಿಲೆ ಹರಡುವಂತೆ ಮಾಡಬೇಡಿ ಎಂದು ಹೇಳಿ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಪ್ರಾರ್ಥಿಸುತ್ತೇನೆ. ಇಲ್ಲದಿದ್ದರೆ, ಊರಿಂದೂರಿಗೆ ಕಾಯಿಲೆ ಹರಡುವುದರಿಂದ ರೈತರಿಗೂ ಮತ್ತು ಸರ್ಕಾರಕ್ಕೂ ಅಧಿಕ ಪ್ರಮಾಣದಲ್ಲಿ ನಷ್ಟವಾಗುತ್ತದೆ. ಔಷಧಿಗಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿರುವಾಗ ಬಡಪಾಯಿ ರೈತರುಗಳಿಗೆ ೮-೧೦ ಸಾವಿರ ರೂಪಾಯಿಗಳ ಪರಿಹಾರ ಕೊಡುವುದರಿಂದ ಸರ್ಕಾರಕ್ಕೇನೂ ನಷ್ಟವಾಗುವುದಿಲ್ಲ ಆದುದರಿಂದ, ದೊಡ್ಡಮನಸ್ಸು ಮಾಡಿ, ಬಡ ರೈತರಿಗೆ ಪರಿಹಾರ ಕೊಡುವ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಮೂರನೆಯದಾಗಿ, ಬಳ್ಳಾರಿ ಜಿಲ್ಲೆಯಲ್ಲಿ ರೋಗವು ಕಾಣಿಸಿಕೊಂಡಾಗ ಅದನ್ನು ನಿಯಂತ್ರಿಸಲಿಕ್ಕೆ ಕ್ರಮ ಕೈಗೊಳ್ಳಲಾಗಿದೆ. ಆದರೆ, ಕಾರಣಾಂತರಗಳಿಂದ ಈ ಕಾಯಿಲೆ ಏನಾದರೂ ಇತರ ಜಿಲ್ಲೆಗಳಿಗೆ ಹರಡಿದರೆ, ಅದನ್ನು ತಡೆಗಟ್ಟಲು ಏನು ಕ್ರಮವನ್ನು ಕೈಗೊಳ್ಳಲಾಗಿದೆ ಎಂಬ ಬಗ್ಗೆ ಮಾನ್ಯ ಸಚಿವರು ವಿವರಗಳನ್ನು ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನು ನಾಲ್ಕನೆಯದಾಗಿ, ರೋಗ ನಿಯಂತ್ರಣ ಕಾಯಿದೆ ಪ್ರಕಾರ ಈ ರೋಗಗಳಿಗೆ ಪರಿಹಾರ ಕೊಡಲು ಬರುವುದಿಲ್ಲವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಕಾಯಿದೆ ಪ್ರಕಾರ ಪರಿಹಾರ ಕೊಡಿ ಎಂದೇನೂ ನಾವು ಕೇಳುತ್ತಿಲ್ಲ. ಮಾನವೀಯ ದೃಷ್ಟಿಯಿಂದ ಕೊಡಿ. ಯಾವುದೋ ಒಂದು ಕಾಯಿದೆ ಪ್ರಕಾರ ಕೊಡುವುದಕ್ಕಾಗುವುದಿಲ್ಲವೆಂದರೆ, ಸಾಕಷ್ಟು ನಷ್ಟ ಅನುಭವಿಸಿರುವ ರೈತರಿಗೆ ಪರಿಹಾರ ಕೊಡುವುದಕ್ಕೆ ಬರುವುದೇ ಇಲ್ಲವೆ ? ರಸ್ತೆ ಅಪಘಾತವಾದರೆ ಪರಿಹಾರ ಕೊಡುತ್ತೀರಿ ; ಬೆಂಕಿ ಬಿದ್ದರೆ ಪರಿಹಾರ ಕೊಡುತ್ತೀರಿ ; ಬೇರೆ ಬೇರೆ ಅನಾಹುತಗಳಿಗೆಲ್ಲ ಕೊಡುತ್ತೀರಿ.

ಒಬ್ಬ ಸದಸ್ಯರು.—ವಿಮೆ ಮಾಡಿಸಬಹುದು.

ಶ್ರೀ ಕೆ. ಹೆಚ್. ಹನುಮೇಗೌಡ.—ಇವತ್ತು ಮರಿ ಹಾಕುತ್ತವೆ, ನಾಳೆ ಸತ್ತು ಹೋಗುತ್ತವೆ. ಇಂಥವನ್ನೆಲ್ಲ ವಿಮೆ ಮಾಡಿಸುತ್ತಾ ಇರುವುದಕ್ಕಾಗುತ್ತದೆಯೇ ?

ಅಧ್ಯಕ್ಷರು.—ತಾವು ಹೇಳಿದ್ದನ್ನೇ ಹೇಳುತ್ತಿದ್ದೀರಿ. ಅಷ್ಟೊಂದು ಉದ್ವೇಗವೇತಕ್ಕೆ ?

ಶ್ರೀ ಕೆ. ಹೆಚ್. ಹನುಮೇಗೌಡ.—ಮಾನ್ಯ ಅಧ್ಯಕ್ಷರೇ, ಬೇರೆಯವರ ಪ್ರಶ್ನೆಗಳು ಬಂದಾಗ ಸರ್ಕಾರ ಪರಿಹಾರ ಕೊಡುತ್ತದೆ. ಆದರೆ, ಬಡಪಾಯಿ ರೈತರ ಪ್ರಶ್ನೆ ಬಂದಾಗ, ಯಾವುದೋ ಕಾನೂನನ್ನು ಮುಂದಿಕ್ಕೆ ಹಿಡಿದು ಪರಿಹಾರ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದಾಗ ನನಗೆ ಬಹಳ ಸಂಕಟವಾಗುತ್ತದೆ ; ಇದನ್ನೆಲ್ಲ ನೋಡಿದಾಗ ನನಗೆ ಉದ್ವೇಗ ಬರುತ್ತದೆ. ಈ ಕಾನೂನು ಪ್ರಕಾರ ಅವರಿಗೆ ಪರಿಹಾರ ಕೊಡುವುದು ಬೇಡ. ರೈತರು ಈ ದೇಶಕ್ಕಾಗಿ ದುಡಿದಿದ್ದಾರೆ ; ಬೆವರು ಸುರಿಸಿದ್ದಾರೆ. ಅವರಿಂದಲೇ ನಾವಿಲ್ಲಿರುವುದು. ಇಂದು ನೂರಾರು ಜನ ಕುರಿಪಾಲಕರು ಮನೆ ಮಠವಿಲ್ಲದೆ ಬೀದಿಪಾಲಾಗಿದ್ದಾರೆ. ಅವರು ಬೀದಿ ಪಾಲಾದರೆ ಸರ್ಕಾರ ಇದ್ದರೇನು, ಇಲ್ಲದಿದ್ದರೇನು ? ಎನ್ನುವ ಪ್ರಶ್ನೆ ಬರುತ್ತದೆ. ಆದುದರಿಂದ, ದಯವಿಟ್ಟು ಮಾನವೀಯ ದೃಷ್ಟಿಯಿಂದ ಅವರಿಗೆ ಪರಿಹಾರ ಒದಗಿಸುವುಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ಜೊತೆಗೆ ರಿಂಡರ್‌ಪೆಸ್ಟ್ ಕಾಯಿಲೆ ನಿರ್ಮೂಲನಾ ಯೋಜನೆಯನ್ನು ಇಡೀ ರಾಜ್ಯದಲ್ಲೆಲ್ಲ ಜಾರಿಗೆ ತಂದು, ಅದು ಹರಡದಂತೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

೨-೩೦ ಪಿ.ಎಂ.

ಶ್ರೀ ಹೆಚ್. ವಿಶ್ವನಾಥ್.—ಮಾನ್ಯ ಮಂತ್ರಿಯವರ ಎಂಟು ಪುಟದ ದೀರ್ಘ ಉತ್ತರದಲ್ಲಿ ಕುರಿ ಸಾಕಾಣಿಕೆದಾರರು ಎಷ್ಟು ಜನ ಬೀದಿ ಪಾಲಾಗಿದ್ದಾರೆ ? ಎಷ್ಟು ಜನಕ್ಕೆ ಪರಿಹಾರ ಕೊಡಲಾಯಿತು ? ಇದರ ಬಗ್ಗೆ ಸರ್ಕಾರದವರ ನೀತಿ ಏನು ? ಸತ್ತಿರತಕ್ಕ ಕುರಿಗಳ ಸಂಖ್ಯೆ ಎಷ್ಟು ? ಎನ್ನುವ ಮಾಹಿತಿಯನ್ನು ಕೊಟ್ಟಿಲ್ಲ. ಉತ್ತರ ಕರ್ನಾಟಕದಲ್ಲಿ ಒಂದೊಂದು ಮಂದೆ ಅಂದರೆ ೫-೧೦ ಸಾವಿರ ಕುರಿಗಳು ಇರುತ್ತವೆ. ಒಟ್ಟೊಟ್ಟಿಗೆ ಕುರಿಗಳು ಸತ್ತಿವೆ. ಊರೂರೇ ಶೋಚನೀಯ ಪರಿಸ್ಥಿತಿಯಲ್ಲಿರತಕ್ಕ ಸನ್ನಿವೇಶ ಇದೆ. ತಾವು ವಿಮಾನದಿಂದ ಲಸಿಕೆಗಳನ್ನು ತರಿಸಿ, ಮುಂಜಾಗ್ರತೆ ಕ್ರಮ ಕೈಗೊಂಡಿದ್ದಕ್ಕೆ ನಾವು ಆಭಾರಿಯಾಗಿದ್ದೇವೆ. ನಾನು ಹಿಂದುಳಿದ ವರ್ಗಗಳ ಶಾಸಕನಾಗಿ ಹೇಳುತ್ತಿದ್ದೇನೆ, ನಿಮ್ಮ ಎಂಟು ಪುಟಗಳ ವರದಿಯಿಂದ ನಮಗೆ ಸಮಾಧಾನವಾಗಿಲ್ಲ. ಈ ಸದನದಲ್ಲಿ ಬೀದಿ ಪಾಲಾಗಿರತಕ್ಕ ಕುರಿ ಪೋಷಕರಿಗೆ ಪರಿಹಾರ

ಕೊಡುವ ಬಗ್ಗೆ ಸ್ಪಷ್ಟವಾಗಿ ಹೇಳಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಂ. ತಮ್ಮಯ್ಯ.—ಸ್ವಾಮಿ, ತಮ್ಮ ವರದಿ ನೋಡಿದಮೇಲೆ, ನನಗನಿಸುತ್ತೆ, ಕಾಯಿಲೆ ಬಂದ ಮೇಲೆ ಸರ್ಕಾರದವರು ಅತ್ತ ಕಡೆ ಗಮನಹರಿಸಿದ್ದಾರೆಂದು. ರಾಜ್ಯದಲ್ಲಿ ಕುರಿಗಳ ಮತ್ತು ಜಾನುವಾರುಗಳ ಸಂಖ್ಯೆ ಜಾಸ್ತಿ ಇದೆ. ಆದರೂ ಸಾಕಷ್ಟು ಲಸಿಕೆಗಳನ್ನು ತಯಾರು ಮಾಡುವುದಕ್ಕೆ ಕ್ರಮ ತೆಗೆದುಕೊಂಡಿಲ್ಲ. ಈ ಕಾಲದಲ್ಲಿ ಚುಚ್ಚುಮದ್ದಿನ ಅವಶ್ಯಕತೆ ಬಹಳ ಇದೆ. ಇವತ್ತು ತಿನ್ನುವವರ ಸಂಖ್ಯೆ ಜಾಸ್ತಿಯಾಗಿ ಒಂದು ಕೆ.ಜಿ. ಮಾಂಸಕ್ಕೆ ೨೦-೨೫ ರೂಪಾಯಿ ಆಗಿದೆ. ಲಕ್ಷಾಂತರ ಕುರಿಗಳು ಸತ್ತರೆ, ಇವರ ಗತಿ ಏನು ? ಇವತ್ತು ಗೋಮಾಳ ಜಮೀನುಗಳೆಲ್ಲಾ ಹಾಳಾಗಿ ಕುರಿ ಸಾಕುವವರ ಸಂಖ್ಯೆ ಕಡಿಮೆಯಾಗಿದೆ. ಅಲ್ಪಸ್ವಲ್ಪ ಕುರಿ ಇದ್ದವರು ಇಂಥ ರೋಗಕ್ಕೆ ಗುರಿಯಾದರೆ, ಈ ಜನಾಂಗದ ಗತಿ ಏನು? ತಾವು ತಿಳಿಸಿದಂತೆ ಇವರು ಅಲೆಮಾರಿಗಳು. ಅಲ್ಲಿ ಇಲ್ಲಿ ಮಂದೆ ನಿಲ್ಲಿಸಿಕೊಂಡು, ಮರಿಗಳನ್ನು ಮಾರಿ, ಕಂಬಳಿ ತೆಗೆದುಕೊಳ್ಳುವಂತಹ ಜನ ಸಂತೆಗಳಿಗೆ ಕುರಿಗಳನ್ನು ಹೊಡೆದುಕೊಂಡು ಹೋಗಿ, ಮಾರಾಟ ಮಾಡಿ ಜೀವನ ಮಾಡುವಂತ ಜನ, ಕಷ್ಟಕ್ಕೆ ಗುರಿಯಾಗಿರುವ ಇವರಿಗೆ ಆರ್ಥಿಕ ನೆರವು ನೀಡಬೇಕೆಂದು ಹೇಳುತ್ತೇನೆ. ಸ್ವಾಮಿ, ನನ್ನ ಒಂದು ಸಲಹೆ ಸರ್ಕಾರದವರು ಲಸಿಕೆಯನ್ನು ಇಲ್ಲಿಯೇ ತಯಾರು ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಕಾಯಿಲೆ ಬಂದಾಗ ಚುಚ್ಚು ಮದ್ದು ಹಾಕುವುದನ್ನು ಬಿಟ್ಟು ಕೋಳಿಗಳಿಗೆ ಹಾಕಿದಂತೆ ಕಾಯಿಲೆ ಬರುವುದಕ್ಕೆ ಮುಂಚೆ ಚುಚ್ಚುಮದ್ದು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಕುರಿ ಪೋಷಕರು ಒಂದು ಕುರಿಗೆ ರೋಗ ಕಾಣಿಸಿಕೊಂಡರೆ, ಇಡೀ ಮಂದೆಯನ್ನೇ ಮಾರುತ್ತಾರೆ. ಇವು ಕಟುಕರ ಅಂಗಡಿಗೆ ಸೇರುತ್ತವೆ ; ಕಟುಕ ಇವುಗಳನ್ನು ಕಡಿಮೆ ಮಾರುತ್ತಾನೆ ; ರೋಗಕ್ಕೆ ತುತ್ತಾದ ಕುರಿಗಳ ಮಾಂಸವನ್ನು ತಿಂದು ತಿನ್ನುವುದರಿಂದ ಮನುಷ್ಯನ ಆರೋಗ್ಯದ ಮೇಲೆ ಎಷ್ಟು ಭೀಕರ ಪರಿಣಾಮವಾಗುತ್ತದೆಂಬುದನ್ನು ತಾವು ಯೋಚನೆ ಮಾಡಬೇಕು. ಆದ್ದರಿಂದ ರಾಜ್ಯದಲ್ಲಿಯೇ ಹೆಚ್ಚು ಹೆಚ್ಚು ಲಸಿಕೆಗಳನ್ನು ತಯಾರು ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಹೆಚ್ಚು ತಯಾರು ಮಾಡಿದರೆ, ಬೇರೆ ರಾಜ್ಯಕ್ಕೆ ಕೊಡೋಣ. ನಾವು ಹೋಗಿ ಇನ್ನೊಬ್ಬರಿಂದ ತೆಗೆದುಕೊಂಡು ಬರುವುದು ಬೇಡ ; ಮುಂದೆ ಮುಂದೆ ಕುರಿಗಳನ್ನು ಕಳೆದುಕೊಂಡವರಿಗೆ ೧೦-೧೦ ಕುರಿ ಗಳನ್ನು ಸಾಕುವುದಕ್ಕೆ ಸಾಲ ಕೊಡುವಂತ ವ್ಯವಸ್ಥೆ ಮಾಡಿದ್ದೀರಿ. ಇದರಿಂದ ಕುರಿ ಪೋಷಕರಿಗೆ ಅನುಕೂಲ ವಾಗುತ್ತದೆಯೆ ? ಪ್ರತಿ ವರ್ಷವೂ ಲಸಿಕೆ ಹಾಕುವಂತ ವ್ಯವಸ್ಥೆ ಮಾಡಿದರೆ ; ಮುಂದೆ ಆಗತಕ್ಕ ಅನಾಹುತವನ್ನು ತಪ್ಪಿಸುವುದಕ್ಕೆ ಆಗುವುದಿಲ್ಲವೆ ? ಕೆಲವರು ಒಪ್ಪುವುದಿಲ್ಲ ; ಹಾಲು ಕಡಿಮೆಯಾಗುತ್ತೆ, ಕಂದಾಗುತ್ತೆ ಎಂದು ಹೇಳುತ್ತಾರೆ. ತಾವು ಒತ್ತಾಯ ಮಾಡಿ ಪ್ರತಿವರ್ಷವೂ ಚುಚ್ಚುಮದ್ದು ಹಾಕಬೇಕು. ಸರ್ಕಾರದವರು ಈ ರೀತಿ ಮಾಡದೇಹೋದರೆ ಇನ್ನು ೨-೩ ವರ್ಷಗಳಲ್ಲಿ ಕುರಿಗಳ ಸಂಖ್ಯೆ ಉಳಿಯುವುದಿಲ್ಲ. ಆಮೇಲೆ ನಾವೆಲ್ಲಾ ಕೋಳಿಗಳಿಗೆ ಹೋಗಬೇಕಾಗುತ್ತದೆ. ಅದಕ್ಕೋಸ್ಕರ ಕುರಿ ಕಳೆದುಕೊಂಡ ಪೋಷಕರಿಗೆ ಪರಿಹಾರ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆಂದಾನಯ್ಯ —ಪರಿಹಾರ ಕೊಡುವುದಕ್ಕೆ ಕಾನೂನು ಅಡ್ಡಿ ಇರುವುದರಿಂದ ಕೊಡುವುದಕ್ಕೆ ಬರುವುದಿಲ್ಲವೆಂದು ಹೇಳಿದ್ದೀರಿ. ಯಾವುದೋ ತಾತನ ಕಾಲದಲ್ಲಿ ಮಾಡಿದಂತ ಕಾನೂನಿಗೆ ತಿದ್ದುಪಡಿ ತರುವುದಕ್ಕೆ ಏನು ಅಡ್ಡಿಯಿದೆ. ಲಕ್ಷಾಂತರ ರೂಪಾಯಿಗಳನ್ನು ನಷ್ಟ ಅನುಭವಿಸಿರತಕ್ಕ ಕುರಿ ಪೋಷಕರಿಗೆ ಈಗ ಇರತಕ್ಕ ಕಾನೂನಿಗೆ ತಿದ್ದುಪಡಿ ತಂದು ಪರಿಹಾರ ಕೊಡುವುದಕ್ಕೆ ಮನಸ್ಸು ಮಾಡುತ್ತೀರಾ ಸ್ವಾಮಿ ?

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಮಂತ್ರಿಯವರ ಪ್ರಯತ್ನ ಪ್ರಶಂಸನೀಯವಾದುದು. ತುಮಕೂರು ಜಿಲ್ಲೆಯಲ್ಲಿ ಸಾವಿರಾರು ಕುರಿಗಳು ಸತ್ತು ಹೋಗಿವೆ, ಡಿ.ಪಿ.ಎ.ಪಿ. ಸ್ಕೀಮಿನಲ್ಲಿ ಕೊಟ್ಟಂತ ಸಾವಿರಾರು ರೂಪಾಯಿ ಸಾಲ ಮಾಡಿ ತೆಗೆದುಕೊಂಡಂತ ಕುರಿಗಳು ಸತ್ತು ಹೋಗಿವೆ.

ಅಧ್ಯಕ್ಷರು.—ಸರ್ಕಾರದಿಂದ ಕೊಟ್ಟಿರತಕ್ಕಂಥ ಕುರಿಗಳಿಗ ಬಂದಿದೆಯೆ ?

ಶ್ರೀ ಜಿ. ಎಸ್. ಶಿವನಂಜಪ್ಪ.—ಜಾಸ್ತಿ ಬಂದಿರುವುದು ಅವುಗಳಿಗೆ ಅಂತ ಕಾಣುತ್ತೆ ; ಅವು ಸೇರಿ ಸತ್ತುಹೋಗಿವೆ. ಇವತ್ತು ಸಾಲದ ಹೊರೆ ಅವರ ಮೇಲೆ ಬಿದ್ದಿದೆ. ಇಂಥಾದ್ದಕ್ಕೆ ಪರಿಹಾರ ಕೊಡುವು ದಕ್ಕೆ ಕಾನೂನು ಅಡ್ಡಿ ಬರುತ್ತೆಂದು ಹೇಳಿದರೆ ಹೇಗೆ ? ತಾವೇ ಡಿಪ್ಯಾಂಡ್ ಬಂದಾಗ ಸಬ್ಸೀಡಿ ಕೊಟ್ಟಿದ್ದೀವೆ, ನಾನು ಕೊಟ್ಟಷ್ಟು ಹಣ ಯಾರು ಕೊಟ್ಟಿಲ್ಲವೆಂದು ಎದೆಮುಟ್ಟಿಕೊಂಡು ಹೇಳುತ್ತೀರಿ.

ಇಪತ್ತು ಸರ್ಕಾರದವರು ಪರಿಹಾರ ಕೊಡದಿದ್ದರೆ ಕುರಿ ಪೋಷಕರು ಮನೆ ಮಠಗಳನ್ನು ಮಾರಿಕೊಂಡು ಊರು ಬಿಡಬೇಕಾದ ಪರಿಸ್ಥಿತಿ ಇದೆ. ತುಮಕೂರು ಜಿಲ್ಲೆಯಲ್ಲಿ ಸತ್ತಿರುವಕ್ಕೆ ಕುರಿಗಳೆಷ್ಟು? ಕುರಿಗಳನ್ನು ಕಳೆದುಕೊಂಡಂತ ಪೋಷಕರಿಗೆ ಪರಿಹಾರ ಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಗಂಗಣ್ಣ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ರೋಗ ನಿಯಂತ್ರಣ ಮಾಡುವುದಕ್ಕೆ ತೆಗೆದುಕೊಂಡಂತ ಕಾರ್ಯಕ್ರಮಗಳ ಬಗ್ಗೆ ದೀರ್ಘ ಉತ್ತರ ಕೊಟ್ಟಿದ್ದಾರೆ. ಮೇಕೆಗಳಿಗೆ, ಕುರಿಗಳಿಗೆ ಹಾಗೂ ಜನಗಳಿಗೆ ಬರುತ್ತಿರುವ ಈ ರೋಗವನ್ನು ಸಂಪೂರ್ಣವಾಗಿ ತಡೆಗಟ್ಟುವುದಕ್ಕೆ ಪ್ರಯತ್ನ ಮಾಡಿದಂತೆ ಕಾಣುವುದಿಲ್ಲ. ಇಪತ್ತು ದೊಡ್ಡ ರೋಗಕ್ಕೆ ಬಳ್ಳಾರಿ ಜಿಲ್ಲೆಯಲ್ಲಿ ಜಾಸ್ತಿ ಕುರಿಗಳು ಸತ್ತು ಹೋಗಿವೆ. ಸತ್ತು ಹೋಗಿರುವಕ್ಕೆ ಕುರಿಗಳ ಅಂದಾಜು ಸರ್ಕಾರಕ್ಕೆ ಬಂದಿದೆಯೆ? ಬೇರೆ ಬೇರೆ ಜಿಲ್ಲೆಗಳಲ್ಲಿ ಈ ರೋಗಕ್ಕೆ ಬಲಿಯಾಗಿರುವಕ್ಕೆ ಕುರಿಗಳ ಅಂದಾಜು ಇದೆಯೆ? ಎಷ್ಟು ಜನ ಸಣ್ಣ ರೈತರು ಅತಿ ಸಣ್ಣ ರೈತರು ಇದರಿಂದ ತೊಂದರೆಗೆ ಗುರಿಯಾಗಿದ್ದಾರೆಂಬ ವರದಿ ಇದೆಯೆ? ಕೊಲ್ಲಾಪುರ, ಬೆಳಗಾಂ, ಮಲೆನಾಡು, ಅರೆ ಮಲೆನಾಡು–ಅಂದರೆ ಬಯಲುಸೀಮೆ ಮತ್ತು ಆಂಧ್ರಪ್ರದೇಶದ ರಾಯಲಸೀಮೆಯಿಂದ ಈ ರೋಗ ಬಂತು ಎಂದು ತಮ್ಮ ವರದಿಯಲ್ಲಿ ಹೇಳಿದ್ದೀರಿ. ಪ್ರತಿ ವರ್ಷವೂ ಬರುವಕ್ಕೆ ಈ ರೋಗವನ್ನು ತಡೆಗಟ್ಟುವುದಕ್ಕೆ ಬೇಕಾದ ಲಸಿಕೆಯನ್ನು ಸಾಕಷ್ಟು ಸಂಖ್ಯೆಯಲ್ಲಿ ಸರ್ಕಾರದವರು ಇಟ್ಟಿಲ್ಲವೆನ್ನುವುದು ತಮ್ಮ ಉತ್ತರದಿಂದ ಗೊತ್ತಾಗುತ್ತದೆ. ಈ ದಿಸೆಯಲ್ಲಿ ಸರ್ಕಾರದವರು ಮುಂಜಾಗ್ರತೆ ಕ್ರಮ ಏತಕ್ಕೆ ತೆಗೆದುಕೊಳ್ಳಲಿಲ್ಲ? ಸ್ವಾಮಿ, ಈ ರೋಗ ೨೬–೧೨–೮೦ರಲ್ಲಿ ಕಾಣಿಸಿಕೊಂಡಿತು ಎಂದು ತಿಳಿಸಿದ್ದೀರಿ. ಆದರೂ, ಹೆಚ್ಚಿನ ಒಂದು ರೀತಿಯಲ್ಲಿ ಕಾರ್ಯಕ್ರಮ ಏತಕ್ಕೆ ತೆಗೆದುಕೊಳ್ಳಲಿಲ್ಲವೆಂದು ಕೇಳುತ್ತೇನೆ.

ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಕುರಿ ಜೀಪ ವಿಮೆ ಮಾಡಲಿಕ್ಕೆ ತಿಳಿಸಲಾಗಿದೆಯೆಂದು ತಿಳಿಸಿದರು. ಇದು ನಮ್ಮ ರಾಜ್ಯದಲ್ಲಿ ಯಾವ ವರ್ಷದಿಂದ ಬಂದಿದೆ ಕುರಿಗಾರರ ಜನಾಂಗಕ್ಕೆ ಸೇರಿದ ನಮಗೆ ಗೊತ್ತಿರಲಿಲ್ಲ. ಈಗ ಕುರಿಗಳು ಸತ್ತಿರುವ ಬಗ್ಗೆ ಪರಿಹಾರ ಕೊಡಲಿಕ್ಕೆ ಸಾಧ್ಯವಿಲ್ಲ ಎಂದು ತಿಳಿಸಿದ್ದೀರಿ. I would like to quote Section 33 of the Mysore Animal Diseases (Control) Act, 1961. It says.

> "No person shall be entitled to any compensation in respect of destruction of any animal or a thing or any other loss, injury, detriment or inconvenience caused to him by reason of anything done under this Act in good faith"

ಇವೊತ್ತು ಒಂದು ಕುರಿ ಆಗಲಿ, ಮೇಕೆ ಆಗಲಿ, ದನಗಳು ಆಗಲಿ, ಅವುಗಳಿಗೆ ಪಶುವೈದ್ಯಅಧಿಕಾರಿಗಳು ಔಷಧೋಪಚಾರ ಮಾಡುವಾಗ ಅವುಗಳು ಸತ್ತರೆ ಪರಿಹಾರ ಕೊಡಲಿಕ್ಕೆ ಆಗುವುದಿಲ್ಲ ಎಂದರೆ ಹೇಗೆ? ಅಂತಹ ಸಂದರ್ಭದಲ್ಲಿ ಪರಿಹಾರ ಕೊಡಲಿಕ್ಕೆ ಕ್ರಮ ಕೈಗೊಳ್ಳಬೇಕಾಗುತ್ತದೆ. ಕೊಲ್ಲಾಪುರ ಜಿಲ್ಲಾಪರಿಷತ್ತಿನವರು ಡಿ.ಐ.ಆರ್. ಮುಖಾಂತರ ಕುರಿಗಳಿಗಾಗಿ ಏನು ಸಾಲವನ್ನು ಕೊಟ್ಟಿದ್ದಾರೆ ಅದನ್ನು ಮನ್ನಾ ಮಾಡುವಂತೆ ಮಾಡಬೇಕು ಹಾಗೆ ಉಳಿದವರಿಗೂ ಕೂಡ ಪರಿಹಾರ ಕೊಡಲಿಕ್ಕೆ ಕಾಯಿದೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಕೆ.ಎಂ. ತಮ್ಮಯ್ಯ.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳೇನೋ ಪರಿಹಾರ ಕೊಡುತ್ತೇವೆಂದು ಹೇಳುತ್ತಾರೆ. ಆನಂತರ ಕೇಳಿದರೆ ಫೈನಾನ್ಸ್ ಮಿನಿಸ್ಟರ್ ಒಪ್ಪಲಿಲ್ಲ ಎಂದು ಹೇಳುತ್ತಾರೆ. ಈಗ ಇಬ್ಬರೂ ಪಕ್ಕದಲ್ಲಿಯೇ ಇರುವುದರಿಂದ ಮಾನ್ಯ ಮಂತ್ರಿಗಳು ಹಣಕಾಸಿನ ಮಂತ್ರಿಗಳನ್ನು ಕೇಳಿ ಬಂದೋಬಸ್ತು ಮಾಡಿಕೊಂಡು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈ. ರಾಮಕೃಷ್ಣ (ಕಾನೂನು ಮಂತ್ರಿಗಳು).–ಸನ್ಮಾನ್ಯ ಅಧ್ಯಕ್ಷರೆ, ಟೈಮ್ ಬಾರ್ ಆದದ್ದು ಕೊಟ್ಟಿದ್ದರಿಂದ ಏನೂ ಪ್ರಯೋಜನವಾಗಲಿಲ್ಲ ಎಂದು ನಮ್ಮ ಸ್ನೇಹಿತರು ಹೇಳಿದರು. ಇಪ್ಪತ್ತು ಇಡೀ ದೇಶದಲ್ಲಿಯೇ ವ್ಯಾಕ್ಸಿನ್ ಅಭಾವ ಇರುವಾಗ, ಕರ್ನಾಟಕ ರಾಜ್ಯದಲ್ಲಿ ವ್ಯಾಕ್ಸಿನ್ ಅಭಾವ ಇರುವಾಗ ವ್ಯಾಕ್ಸಿನ್ ಟೈಮ್ ಬಾರ್ ಪ್ರಶ್ನೆಯೇ ಬರುವುದಿಲ್ಲ. ತಮ್ಮ ಮುಂದೆ ಒಂದು ಸ್ಟೇಟ್‌ಮೆಂಟ್ ಹೇಳಬೇಕು ಎಂದರೆ ನಾವು ೧೯–೪–೮೦ರಲ್ಲಿಯೇ ೨೪.೯೬೩ ರೂಪಾಯಿ ವ್ಯಾಕ್ಸಿನ್ ಬೇಕು ಎಂದು ಇಜಾದ್

ನಗರ ಸಂಸ್ಥೆಗೆ ಇಂಡೆಂಟ್ ಕಳುಹಿಸಿಕೊಟ್ಟಿದ್ದೇವೆ. ಅವರು ೪-೬-೮೦ರಲ್ಲಿ ಅದು ಆದಮೇಲೆ ೧೫-೯-೮೦ಕ್ಕೆ ಲಸಿಕೆಯನ್ನು ಕಳುಹಿಸಿಕೊಟ್ಟಿದ್ದಾರೆ. ನಾವು ಅಡ್ವಾನ್ಸ್ ಪೇಮೆಂಟ್ ಮಾಡಿದ ೬ ತಿಂಗಳಿಗೆ ಕಳುಹಿಸಿ ಕೊಡುತ್ತಾರೆ. ಅದೇ ರೀತಿ ಇನ್ನೊಂದು ಇಂಡೆಂಟ್ ೨೦-೯-೮೦ರಲ್ಲಿ ಅದು ಲಾಸ್ಟ್ ಇಯರ್ ೨೪,೯೬೦ ರೂಪಾಯಿ. ಇದನ್ನು ಐ.ವಿ.ಆರ್. ಇಜಾದ್ ಸಂಸ್ಥೆಗೆ ಕಳುಹಿಸಿಕೊಟ್ಟಿದ್ದೇವೆ. ಅವರು ಔಷಧಿಯನ್ನು ಕೊಟ್ಟಿರುವುದು ೧೦-೧೨-೮೦ರಲ್ಲಿ.ಇನ್ನೊಂದು ೧೯೮೧ರಲ್ಲಿ ಔಷಧಿ ಕಳುಹಿಸಿ ಕೊಟ್ಟಿದ್ದಾರೆ. ನಾವು ೬ತಿಂಗಳ ಮುಂಚೆ ಅಡ್ವಾನ್ಸ್ ಪೇಮೆಂಟ್ ಮಾಡಿದರೂ ನಮಗೆ ಔಷಧಿ ಬರತಕ್ಕದ್ದು ಎರಡು ಕಂತಿನಲ್ಲಿ. ಇನ್ನೊಂದು ೨೪,೯೬೦ ರೂಪಾಯಿನ ಔಷಧಿಯನ್ನು ೮-೪-೮೧ರಲ್ಲಿ ಇಜಾದ್ ನಗರ ಸಂಸ್ಥೆಯವರು ಕಳುಹಿಸಿಕೊಟ್ಟಿದ್ದಾರೆ. ನಮಗೆ ಬಂದಿರತಕ್ಕದ್ದು ೫೦-೩-೮೦ ರಲ್ಲಿ ೪ ಲಕ್ಷ ರೂಪಾಯಿ ವ್ಯಾಕ್ಸಿನ್, ೩-೬-೮೦ರಲ್ಲಿ ೧ ಲಕ್ಷ ರೂಪಾಯಿ. ನಾವು ೬ ತಿಂಗಳು ಮುಂಚೆ ಅಡ್ವಾನ್ಸ್ ಪೇಮೆಂಟ್ ಮಾಡಿ ನಮಗೆ ವ್ಯಾಕ್ಸಿನ್ ಬೇಕು ಎಂದು ಕೇಳುತ್ತಿದ್ದೇವೆ. ಆದ್ದರಿಂದ. ಟೈಮ್ ಬಾರ್ ಎನ್ನುವ ಪ್ರಶ್ನೆಯೇ ಬರುವುದಿಲ್ಲ. ಟೈಮ್ ಬಾರ್ ಎನ್ನತಕ್ಕ ವಿಚಾರ ಸತ್ಯಕ್ಕೆ ದೂರವಾದ ಅಂಶ. ವ್ಯಾಕ್ಸಿನ್ ಮಾಡಿದ ಮೇಲೂ ಕುರಿಗಳು ಏತಕ್ಕೆ ಸತ್ತಿವೆ ಎನ್ನುವ ವಿಚಾರ ಬರುತ್ತದೆ. ನನ್ನ ವಿಚಾರದಲ್ಲಿ ೯೦ ಪರ್‌ಸೆಂಟ್ ಉಳಿಯುತ್ತವೆ, ಇನ್ನು ೧೦ ಪರ್‌ಸೆಂಟ್ ಸತ್ತು ಹೋಗುತ್ತವೆ ಕಾರಣ ಏನು ಎಂದರೆ ಅದು ಇಮಿನೈಸ್ ಆಗಬೇಕಾದರೆ ೨೧ ದಿವಸ ಬೇಕು. ಕಾಯಿಲೆ ಅಟ್ಯಾಚ್ ಆಗಿದ್ದಂತ ಕುರಿಗಳಿಗೆ ಇಮಿನೈಸ್ ಆಗುವುದಿಲ್ಲ. ಸ್ಪೋರೇಜ್ ಡಿಫೆಕ್ಟ್, ಟ್ರಾನ್ಸ್‌ಪೋರ್ಟ್ ಡಿಫೆಕ್ಟ್, ವ್ಯಾಕ್ಸಿನ್ ಕೊಡುವಾಗ ಆಗತಕ್ಕ ಡಿಫೆಕ್ಟ್, ಈ ಮೂರು ಡಿಫೆಕ್ಟ್‌ಗಳು ಇರಬೇಕು. ಈ ತರಹದಲ್ಲಿ ೧೦ ಪರ್‌ಸೆಂಟ್ ಆಗಬಹುದು. ಆದ್ದರಿಂದ, ಟೈಮ್ ಬಾರ್ ಎನುವುದನ್ನು ನಾನು ಒಪ್ಪಲಿಕ್ಕೆ ತಯ್ಯಾರಿಲ್ಲ. ಇನ್ನು ಈ ಲಸಿಕೆಯನ್ನು ಇಲ್ಲಿಯೇ ಏತಕ್ಕೆ ತಯಾರುಮಾಡುವುದಿಲ್ಲ ಎಂದು ಮಾನ್ಯ ಸದಸ್ಯರು ಕೇಳಿದರು. ಇವ್ಹೊತ್ತು ಬೆಂಗಳೂರು ಸೀರಂ ಇನ್‌ಸ್ಟಿಟ್ಯೂಟ್‌ನಲ್ಲಿ ಬಹಳ ಚೆನ್ನಾಗಿ ಕೆಲಸ ನಡೆಯುತ್ತಿದೆ. ಆದರೆ ಅಲ್ಲಿ ನಮ್ಮ .ರಾಜ್ಯಕ್ಕೆ ಎಷ್ಟು ಬೇಕೋ ಅಷ್ಟು ತಯಾರಾಗುತ್ತಿಲ್ಲ. ಪ್ರಾಣಿಗಳಿಗೆ ಬರತಕ್ಕ ಅನೇಕ ಕಾಯಿಲೆಗಳಿಗೆ ಔಷಧಿ ಸಾಕಾಗುವುದಿಲ್ಲ. ಹೆಚ್ಚು ಪ್ರಮಾಣದಲ್ಲಿ ಔಷಧಿಯನ್ನು ತಯಾರು ಮಾಡಲಿಕ್ಕೆ ಕೆಲವು ಮೆಷಿನ್‌ಗಳು ಬೇಕಾಗುತ್ತದೆ. ಈ ಬಗ್ಗೆ ಭಾರತ ಸರ್ಕಾರ ದೊಡನೆ ಪತ್ರವ್ಯವಹಾರ ಮಾಡುತ್ತಿದ್ದೇವೆ. ಆ ಮೆಷಿನ್‌ಗಳು ಬಂದರೆ ಪ್ರಾರಂಭ ಮಾಡುತ್ತೇವೆ. ಈಗ ದೇಶದಲ್ಲಿ ಎಲ್ಲೆಲ್ಲಿ ಔಷಧಿ ತಯಾರಾಗುತ್ತಿದೆ ಅಲ್ಲಿಂದ ತರಿಸಿಕೊಳ್ಳಲಿಕ್ಕೆ ೭ ಸಂಸ್ಥೆಗಳಿಗೆ ಟೆಲಿಗ್ರಾಮ್ ಕೊಟ್ಟಿದ್ದೇವೆ. ಈಗ ಒಂದು ಸಂಸ್ಥೆಯಿಂದ ಬಂದಿದೆ, ಮತ್ತೊಂದು ಸಂಸ್ಥೆಯಿಂದ ಈ ವಾರದಲ್ಲಿ ಬರುತ್ತದೆ, ಇನ್ನು ನಾಲ್ಕೈದು ಸಂಸ್ಥೆಗಳಿಂದ ಈ ತಿಂಗಳಲ್ಲಿ ಗ್ಯಾರಂಟಿಯಾಗಿ ಬರುತ್ತದೆ. ಸಾಕಷ್ಟು ಲಸಿಕೆಯನ್ನು ವರ್ಷಾನುಗಟ್ಟಲೆ ಸ್ಟಾಕ್ ಮಾಡಲಿಕ್ಕೆ ಆಗುವುದಿಲ್ಲ. ಅದು ಹೆಚ್ಚು ದಿವಸ ಸ್ಟಾಕ್ ಮಾಡುವಂಥ ವಸ್ತುವಲ್ಲ, ಸುಮಾರು ಅಂದರೆ ೩ ತಿಂಗಳು ಕಾಲ ಇಡಬಹುದು.

ಶ್ರೀ ಕೆ.ಪೆಚ್. ಹನುಮೇಗೌಡ.—ಅಧ್ಯಕ್ಷರೆ, ಈಗ ಮಾನ್ಯ ಮಂತ್ರಿಗಳು ಬೆಂಗಳೂರಿನಲ್ಲಿರತಕ್ಕ ಒಂದು ಫ್ಯಾಕ್ಟರಿಯಲ್ಲಿ ಲಸಿಕೆ ತಯಾರು ಮಾಡುತ್ತಿದ್ದೇವೆ, ಜೊತೆಗೆ ಕೆಲವು ಮೆಷಿನ್‌ಗಳು ಬೇಕು ಅದಕ್ಕೆ ಆರ್ಡ್ಲ್ ಮಾಡಿದ್ದೇವೆಂದು ಹೇಳಿದರು. ಈಗ ಇರತಕ್ಕ ಫ್ಯಾಕ್ಟರಿಯಲ್ಲಿ ರಾಜ್ಯಕ್ಕೆ ಬೇಕಾಗುವಷ್ಟು ಲಸಿಕೆಯನ್ನು ತಯಾರು ಮಾಡಲಿಕ್ಕೆ ಆಗುವುದಿಲ್ಲವೆ?

ಶ್ರೀ ಪೈ. ರಾಮಕೃಷ್ಣ.—ಅಧ್ಯಕ್ಷರೆ, ಮೆಷಿನ್ ತರಿಸಿಕೊಳ್ಳುವ ಬಗ್ಗೆ ಮಾತುಕತೆ ನಡೆಸುತ್ತಿದ್ದೇವೆ. ಅದಕ್ಕೆ ಫ್ರೀಜಿಂಗ್ ಡ್ರೈ ಮೆಷಿನ್ ಬೇಕಾಗುತ್ತದೆ ಅದನ್ನು ಫಾರಿನ್‌ನಿಂದ ತರಿಸಬೇಕು. ಫಾರಿನ್ ಎಕ್ಸ್‌ಛೇಂಜ್ ಕೇಳಿದ್ದೇವೆ. ಅದರ ಬಗ್ಗೆ ಪತ್ರ ವ್ಯವಹಾರ ನಡೆಯುತ್ತಿದೆ. ೮ ಸಂಸ್ಥೆಗಳಿಗೆ ೮ ಮೆಷಿನ್‌ಗಳು ಬೇಕು. ಈಗ ಮೆಷಿನ್‌ಗಳು ಇಲ್ಲದೇ ಹೋಗಿರುವುದರಿಂದ ಕೆಪ್ಯಾಸಿಟಿ ಜಾಸ್ತಿ ಮಾಡಲಿಕ್ಕೆ ಆಗಿಲ್ಲ. ಈಗ ನಮ್ಮಲ್ಲಿ ಫುಲ್ ಕೆಪ್ಯಾಸಿಟಿ ಸುಮಾರು ೧೦ ಲಕ್ಷದಷ್ಟು ಲಸಿಕೆಯನ್ನು ಅವರು ತಯಾರು ಮಾಡುತ್ತಾರೆ. ಅಷ್ಟನ್ನೂ ಸಂಪೂರ್ಣವಾಗಿ ನಾವೇ ಉಪಯೋಗಿಸಿಕೊಳ್ಳುತ್ತೇವೆ. ಅಷ್ಟೇ ಅಲ್ಲದೇ ಬೇರೆ ಕಡೆಯಿಂದಲೂ ನಾವು ತರಿಸಿಕೊಳ್ಳುತ್ತಿದ್ದೇವೆ. ಈಗ ನಾವು ಏನು ಇಂಡೆಂಟ್ ಮಾಡಿದ್ದೇವೆ ಅದನ್ನು ಸೆಂಟ್ರಲ್ ಗೌರ್ನಮೆಂಟ್‌ನವರು ಇನ್ನು ೬ ತಿಂಗಳಲ್ಲಿ ಕಳುಹಿಸಿಕೊಡುತ್ತಾರೆ ಎನ್ನುವುದನ್ನು ನಿರೀಕ್ಷೆ ಮಾಡಬಹುದು ಎಂದು ಹೇಳುತ್ತೇನೆ. ಇನ್ನು ಬಡವರಿಗೆ ಪರಿಹಾರ ಕೊಡಬೇಕು ಎನ್ನುವ ಪ್ರಶ್ನೆ ಅದು ಬಹಳ ಮುಖ್ಯವಾದಂಥ ಪ್ರಶ್ನೆ. ಕಾನೂನಿನಲ್ಲಿ ಪರಿಹಾರ ಕೊಡಲಿಕ್ಕೆ ಅವಕಾಶ ಇಲ್ಲದೇ ಇದ್ದರೂ ಮಾನವೀಯ ದೃಷ್ಟಿಯಿಂದ ಪುನರ್ ಪರಿಶೀಲನೆ ಮಾಡಬೇಕೆಂಬುದು ಮಾನ್ಯ ಸದಸ್ಯರೆಲ್ಲರ ಅಭಿ

ಪ್ರಾಯ ಎಂದು ಭಾವಿಸಿಕೊಳ್ಳುತ್ತೇನೆ. ಇದರ ಬಗ್ಗೆ ಯಾವುದಾದರೂ ಕಾನೂನಿನ ಕೆಳಗೆ ತಂದು ಪರಿಹಾರ ಸಾಧ್ಯವಾಗುತ್ತದೆಯೇ ಎಂದರೆ ಈಗ ಇರತಕ್ಕ ಕಾನೂನಿನಲ್ಲಿ ಎಲ್ಲಿಯೂ ಪರಿಹಾರ ಕೊಡಲಿಕ್ಕೆ ಸಾಧ್ಯವಿಲ್ಲ. ಆದೇ ಫೈರ್ ಆ್ಯಕ್ಸಿಡೆಂಟ್ ಆದರೆ ಆವರಿಗೆ ಪರಿಹಾರ ಕೊಡಲಿಕ್ಕೆ ಸಾಧ್ಯ ಇದೆ. ಆದರೆ, ಈ ತರಪ ಪ್ರಸಂಗ ಹಿಂದೆಂದೂ ನಡೆದಿರಲಿಲ್ಲ. ಮುಂದೆ ನಡೆಯುತ್ತದೆಯೋ ಇಲ್ಲವೋ ಗೊತ್ತಿಲ್ಲ. ಇದೇ ಸಾರಿ ಪ್ರಪ್ರಥಮ ಬಾರಿ ನಡೆದಿರತಕ್ಕದ್ದು. ಈ ವಿಚಾರದಲ್ಲಿ ಮಾನವೀಯ ದೃಷ್ಟಿಯಿಂದ ನೋಡ ಬೇಕಾದ್ದು ಅಗತ್ಯ ಇದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾನು ಬಳ್ಳಾರಿ ಜಿಲ್ಲೆ ಆಫೆಕ್ಟೆಡ್ ಏರಿಯಾಗಳಿಗೆ ಹೋಗಿ ಭೇಟಿ ಕೊಟ್ಟಿದ್ದೇನೆ. ನೂರಾರು ಜನ ಕುರಿ ಪೋಷಕರು ಏನಿದ್ದಾರೆ ಅವರ ಜೊತೆಯಲ್ಲಿ ಮಾತನಾಡಿದ್ದೇನೆ. ಅವರಿಂದ ಅರ್ಜಿಗಳನ್ನು ಸ್ವೀಕಾರ ಮಾಡಿದ್ದೇನೆ. ಈಗ ಏನಾಗಿದೆ ಎಂದರೆ ಆದರಲ್ಲಿ ನಮ್ಮ ರಾಜ್ಯದ ಕುರಿಗಳು ಎಷ್ಟು? ಬೇರೆ ರಾಜ್ಯಗಳಿಂದ ತೆಗೆದುಕೊಂಡು ಬಂದಿರತಕ್ಕ ಕುರಿಗಳು ಎಷ್ಟು? ಇದನ್ನು ನಾವು ಈಗ ನಿರ್ಧರಿಸಬೇಕಾಗಿದೆ. ಇದು ನಮ್ಮ ರಾಜ್ಯದಿಂದ ಬಂದಿರ ತಕ್ಕದ್ದು ಅಲ್ಲ, ಕೊಲ್ಲಾಪುರದಿಂದ ಪ್ರಥಮವಾಗಿ ಬಂದಿರತಕ್ಕದು. ೬೦-೭೦ ಕುರಿ ಮಂದೆಯನ್ನು ಇಟ್ಟುಕೊಂಡಿರತಕ್ಕವರ ಜೊತೆ ಮಾತನಾಡಿದ್ದೇನೆ. ಜೊತೆಗೆ ಮಹಾರಾಷ್ಟ್ರ ಗೌರ್ನಮೆಂಟ್ ಜಿಲ್ಲಾ ಪರಿ ಷತ್ತಿನವರು ಒಂದು ಕಾಗದ ಬರೆದಿದ್ದಾರೆ, ಅದರಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ.

I will now read the letter dated 7-4-1981 received from Zilla Parishad, Kolhapur. for the information of the hon. members.

> "Seven Sheep flocks from this District were migrated long back to Karnataka State area for grazing. Few shepherd have approached this office and reported that heavy epidemic of sheep pox is prevailing in these flocks. So also Rinderpest like disease is also prevailing in the same flocks. Due to the prevalance of this disease there is considerable going in these said flocks. The Bank of India Branch, Ambewadi, Taluk Karveer, District Kolhapur, has advanced considerable loan for purchasing the sheep units under small farmers development agencies scheme. These are being bank loan purchased animals, supplied under S.F.D.A. scheme, immediate preventing measures are required to be taken up to check up the losses due to mortality. It is, therefore, requested to kindly arrange to provide immediate Veterinary aid to the affected animals and also do arrange immediate preventive vaccination against sheep pox and Rinderpest (Tissue culture rinder pest vaccine). The action taken may kindly be informed to this office early."

(ಮಾನ್ಯ ಉಪಾಧ್ಯಾಕ್ಷರು ಸಭಾಧ್ಯಕ್ಷರ ಪೀಠವನ್ನಲಂಕರಿಸಿದರು)

ನಮ್ಮ ರಾಜ್ಯದಲ್ಲಿ ಯಾವ ಯಾವ ಬಡ ರೈತರ ಕುರಿಗಳು ಈ ಒಂದು ರೋಗಕ್ಕೆ ತುತ್ತಾಗಿವೆ, ಯಾರು ತಮ್ಮ ಜೀವನೋ ಪಾಯಕ್ಕಾಗಿ ಈ ಕುರಿಗಳನ್ನು ಸಾಕುತ್ತಿದ್ದು ಇವತ್ತು ಆ ಕುರಿಗಳು ಸತ್ತಿವೆ ಅಂಥವರಿಗೆ ಪರಿಹಾರವನ್ನು ಕೊಡುವ ವಿಚಾರವನ್ನು ನಾವು ಗಮನಿಸಬೇಕಾಗಿದೆ ; ಇದು ನ್ಯಾಯ ಹಾಗೂ ಧರ್ಮಾವಾದುದು. ಅಲ್ಲದೆ ಇದು ಸರ್ಕಾರದ ಪರಿಶೀಲನೆಯಲ್ಲಿ ಕೂಡ ಇದೆ. ಮಾನ್ಯ ಸದಸ್ಯರು ಮಾತ ನಾಡುತ್ತಾ ಇದುವರೆಗೆ ಈ ರೋಗಕ್ಕೆ ತುತ್ತಾದ ಕುರಿಗಳ ಪೈಕಿ ಎಷ್ಟು ಸತ್ತಿವೆ ಎಂದು ಒಂದು ಸ್ಟೇಟ್ ಮೆಂಟ್‌ನ್ನು ಕೇಳಿದ್ದಾರೆ. ಆದಕ್ಕೆ ನಾನಾದರೂ ಉತ್ತರ ಹೇಳುವುದಿಷ್ಟೆ. ಲಕ್ಷಗಟ್ಟಲೆ ಎಲ್ಲೂ ಸತ್ತಿಲ್ಲ, ಅಥವಾ ಸಾವಿರ ಗಟ್ಟಲೆ ಎಲ್ಲೂ ಸತ್ತಿಲ್ಲ. ಏಕೆಂದರೆ ಯಾರು ಕುರಿ ಸಾಕಿದ್ದರು ಅವರೇ ನನಗೇ ಕೊಟ್ಟಿರುವ ಅಂಕಿಅಂಶಗಳ ಪ್ರಕಾರ ನಾನು ಹೇಳುತ್ತಿದೆ ನೆ. ಬಳ್ಳಾರಿ ಜಿಲ್ಲೆಯ ಕೊಡತಿನಿಯಲ್ಲಿ ೧೮೧೦, ತಿಮ್ಮಲಾ

ಪುರದಲ್ಲಿ ೫೬೦ ಬಲಗೊಳದಲ್ಲಿ ೪೫೦ ದಂಡಿಹಟ್ಟಿಯಲ್ಲಿ ೫೬೩ ಒಟ್ಟು ೩೫೯೧ ಕುರಿಗಳು ಸತ್ತಿವೆ. ಧಾರವಾಡ ಜಿಲ್ಲೆಯ ಮುದನೂರಿನಲ್ಲಿ ೫೫೩ ಯಲ್ಲಾಪುರದಲ್ಲಿ ೪೨೯ ಒಟ್ಟು ೯೮೨ ಕುರಿಗಳು ಸತ್ತಿವೆ. ಈ ಎರಡೂ ಜಿಲ್ಲೆಯಲ್ಲಿ ಒಟ್ಟು ಸುಮಾರು ೫೦೦೦ ಕುರಿಗಳು ಸತ್ತಿವೆ ಎಂದು ಇಟ್ಟುಕೊಳ್ಳಿ. ಇಷ್ಟು ಕುರಿಗಳು ಸತ್ತಿರುವುದರ ಪೈಕಿ ನಮ್ಮ ರಾಜ್ಯದ ಕುರಿಗಳು ಎಷ್ಟು ? ಬೇರೆ ರಾಜ್ಯದ ಕುರಿಗಳು ಎಷ್ಟು ಎಂಬುದನ್ನು ನಾವು ನೋಡಬೇಕಾಗಿದೆ. ಏಕೆಂದರೆ ಇದಕ್ಕೆ ನಾವು ಪರಿಹಾರ ಕೊಡಬೇಕೆಂದು ತಾವು ಹೇಳುತ್ತಿದ್ದೀರಿ. ಆದ್ದರಿಂದ ನಾನು ಈ ವಿಚಾರವನ್ನು ಮಾನ್ಯ ಹಣಕಾಸಿನ ಸಚಿವರ ಗಮನಕ್ಕೆ ತಂದಿದ್ದೇನೆ.

ಮಾನ್ಯ ಉಪಾಧ್ಯಕ್ಷರೆ, ಯಾರು ತುಂಬಾ ಬಡಜನರಾಗಿದ್ದು ಈ ಕುರಿಗಳನ್ನೇ ತಮ್ಮ ಜೀವನಾಧಾರವೆಂದು ತಿಳಿದುಕೊಂಡಿದ್ದರೋ ಅಂಥವರು ಸಂಪೂರ್ಣವಾಗಿ ಎಲ್ಲ ಕುರಿಗಳನ್ನೂ ಕಳೆದುಕೊಂಡಾಗ ಅವರಿಗೆ ಸೂಕ್ತ ಪರಿಹಾರವನ್ನು ಕೊಡಬೇಕೆಂದು ಮಾನವೀಯ ದೃಷ್ಟಿಯಿಂದ ನೋಡಬೇಕಾಗಿದೆ. ಏಕೆಂದರೆ ಯಾರು ಬೆಂಕಿ ಅನಾಹುತದಲ್ಲಿ ತಮ್ಮ ಮನೆಮಠಗಳನ್ನು ಸಂಪೂರ್ಣವಾಗಿ ಕಳೆದುಕೊಳ್ಳುತ್ತಾರೆ ಅಂಥವರಿಗೆ ಮಾನವೀಯತೆ ದೃಷ್ಟಿಯಿಂದ ಪರಿಹಾರವನ್ನು ಕೊಡುತ್ತಿದ್ದೇವೆ. ಅದೇರೀತಿ ಇವರಿಗೂ ಕೂಡ ಮಾನವೀಯತೆ ದೃಷ್ಟಿಯಿಂದ ಕೊಡಬೇಕೆಂದು ಹೇಳಿದ್ದೀರಿ. ಆ ರೀತಿ ಇವರಿಗೂ ಕೊಡಬೇಕಾದರೆ ಕಾನೂನಿನಲ್ಲಿ ಅವಕಾಶವಿರಬೇಕು. ಇದೇ ಬರುವ ೧೩ನೇ ತಾರೀಖು ಇದರ ಬಗ್ಗೆ ಒಂದು ಡಿಮ್ಯಾಂಡ್ ಸಭೆಯಮುಂದೆ ಬರುತ್ತಿದೆ. ಆಗ ಪ್ರತಿಯೊಬ್ಬ ಮಾನ್ಯ ಸದಸ್ಯರೂ ತಮ್ಮ ಅಭಿಪ್ರಾಯಗಳನ್ನು ಕೊಟ್ಟು ಪರಿಹಾರಧನವನ್ನು ಎಷ್ಟು ಕೊಡಬೇಕಾಗುತ್ತದೆ ಎಂದು ತಿಳಿಸಿದರೆ, ನಿಮ್ಮೆಲ್ಲರ ಅಭಿಪ್ರಾಯಗಳನ್ನೂ ಕ್ರೋಢೀಕರಿಸಿ ಅನಂತರ ನಾನು ನನ್ನ ಉತ್ತರವನ್ನು ಸದನಕ್ಕೆ ಕೊಡುವಾಗ ಅವರಿಗೆ ಏನು ಪರಿಹಾರ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ರೋಗ ಬಂದ ಕುರಿಗಳಿಗೆ ಪರಿಹಾರವನ್ನು ಕೊಡುತ್ತೇವೆಂದು ತಾವು ಡಿಕ್ಲೇರ್ ಮಾಡದಿದ್ದರೆ ಏನಾಗುತ್ತದೆ ಎಂದರೆ ಕುರಿಗಳಿಗೆ ಕಾಯಿಲೆ ಬಂದ ಕೂಡಲೇ ಅವು ಸತ್ತುಹೋದರೆ ನಾವು ಇದರಿಂದ ಮುಳುಗಿ ಹೋಗುತ್ತೇವೆಂದು ಕೂಡಲೇ ಅವುಗಳನ್ನು ಬೇರೆ ಕಡೆಗೆ ತೆಗೆದುಕೊಂಡುಹೋಗಿ ಮಾರಾಟ ಮಾಡುತ್ತಾರೆ. ಇದರಿಂದಾಗಿ ಬೇರೆ ಕಡೆಗಳಲ್ಲೂ ಕೂಡ ಈ ರೋಗ ಹರಡುತ್ತದೆ. ಈ ರೋಗ ಹರಡುವುದನ್ನು ತಡೆಗಟ್ಟಬೇಕಾದರೆ ನಾವು ಪರಿಹಾರವನ್ನು ಕೊಡುತ್ತೇವೆಂದು ತಾವು ಡಿಕ್ಲೇರ್ ಮಾಡದಿದ್ದರೆ ಈ ರೋಗ ಹರಡುವುದನ್ನು ತಪ್ಪಿಸುವುದಕ್ಕಾಗುವುದಿಲ್ಲ. ನಿಮ್ಮ ಕೋರ್ಟು, ಕಾನೂನು, ಪೋಲೀಸ್ ಏನೂ ಕೂಡ ಪ್ರಯೋಜನವಾಗುವುದಿಲ್ಲ. ಈ ದೃಷ್ಟಿಯಿಂದಾದರೂ ಅವರಿಗೆ ಪರಿಹಾರವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಿ.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಉಪಾಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಅವರ ವರದಿಯಲ್ಲಿ ಈ ರೀತಿ ಕೊಟ್ಟಿದ್ದಾರೆ. ರೋಗಕ್ಕೆ ತುತ್ತಾದ ಕುರಿಗಳಿಗೆ ರೋಗ ನಿಯಂತ್ರಣ ಕಾಯಿದೆ ಪ್ರಕಾರ ಪರಿಹಾರಧನವನ್ನು ಕೊಡುವುದಕ್ಕೆ ಬರುವುದಿಲ್ಲ ಎಂದು. ಮಾನ್ಯ ಕಾಯಿದೆ ಮಂತ್ರಿಯವರಿಗೆ ಈ ನೋಟನ್ನು ಕೊಟ್ಟವರು ಯಾರು ? ತಮ್ಮಗೆ ಈ ಆಕ್ಟ್‌ನ್ನು ಕಳುಹಿಸಿಕೊಡುತ್ತೇನೆ, ಇಂಥ ರೋಗಗಳು ಬಂದರೆ ಏನು ಮಾಡಬೇಕು, ಏನು ಪರಿಹಾರವನ್ನು ಕೊಡಬೇಕೆಂದು ಇದರಲ್ಲಿ ಸೂಚನೆ ಇದೆ.

ಇನ್ನು ಎರಡನೆಯದಾಗಿ ಡಿಪಾರ್ಟ್‌ಮೆಂಟ್‌ನವರು ಎಕ್ಸ್‌ಪೆರಿಮೆಂಟ್ ಮಾಡುವಾಗ ಹಸು, ಕುರಿ, ಕೋಳಿ, ಕತ್ತೆ, ಸತ್ತುಹೋದರೆ ಅಂಥದ್ದಕ್ಕೆ ಪರಿಹಾರ ಕೊಡುವುದಕ್ಕೆ ಬರುವುದಿಲ್ಲ. ಅಂಥದ್ದಕ್ಕೆ ನಾವು ಕ್ಲೈಂ ಮಾಡುತ್ತಲ್ಲೂ ಇಲ್ಲ. ಇದು ನ್ಯಾಚುರಲ್ ಕಲಾಮಿಟಿಯಿಂದ ಆಗಿರತಕ್ಕದ್ದು. ಇದಕ್ಕೆ ಏತಕ್ಕೆ ಕೊಡುವುದಿಲ್ಲ ? ನನ್ನ ಹತ್ತಿರ ಇರುವ ಈ ಪುಸ್ತಕವನ್ನು ತಮಗೆ ಕಳುಹಿಸಿಕೊಡುತ್ತೇನೆ. ಇದರಲ್ಲಿ ಯಾವ ಪ್ರಾವಿಷನ್‌ನಲ್ಲಿ. ಯಾವ ಸೆಕ್ಷನ್‌ನಲ್ಲಿ ಪರಿಹಾರವನ್ನು ಕೊಡುವುದಕ್ಕೆ ಬರುವುದಿಲ್ಲ ಎಂದು ಇದೆ ಎಂಬುದನ್ನು ತಾವು ದಯವಿಟ್ಟು ತಿಳಿಸಬೇಕು. ಸಾವಿರಾರು ರೂಪಾಯಿಗಳನ್ನು ಸಬ್ಸಿಡಿ ರೂಪದಲ್ಲಿ ಕೊಡುತ್ತಿದ್ದೇವೆಂದು ತಾವು ಹೇಳಿದ್ದೀರಿ. ಈಗ ಈ ಕುರಿಗಳು ರೋಗ ಬಂದು ಸತ್ತುಹೋಗಿವೆ. ಅವರು ಸಾಲವನ್ನು ಕಟ್ಟಿಲ್ಲ. ಅವರ ಮನೆಗಳನ್ನು ಹರಾಜು ಹಾಕುತ್ತಿದ್ದಾರೆ. ಸರ್ಕಾರದವರು ನೋಟೀಸನ್ನು ಕೊಡುತ್ತಿದ್ದಾರೆ. ಆದರೆ ಇಲ್ಲಿ ಮಾನ್ಯ ಸಚಿವರಾದ ಶ್ರೀಕಂಠಯ್ಯನವರು ಹೇಳುತ್ತಾರೆ, ನಾವು ಸಾಲವನ್ನು ವಸೂಲ್ಮಾಡುತ್ತಿಲ್ಲ ಎಂದು. ಆದರೆ ಅಲ್ಲಿ ಮನೆ ಮಠಗಳನ್ನು ಹರಾಜಾಗುತ್ತಿವೆ. ಸ್ಮಾಲ್ ಮಾರ್ಜಿನಲ್ ಫಾರ್ಮರ್ಸ್ ಬೆಳಿಗ್ಗೆ ೫ ಗಂಟೆಗೆ ನನ್ನ ಮನೆಯ ಹತ್ತಿರ ಬಂದು ತಮ್ಮ ಕಷ್ಟಗಳನ್ನು ಹೇಳಿಕೊಳ್ಳುತ್ತಿದ್ದಾರೆ.

ಸ್ವಾಮಿ, ನಮ್ಮ ತುಮಕೂರು ಜಿಲ್ಲೆಯಲ್ಲಿ ಕಳೆದ ವರ್ಷ ಕ್ಷಾಮ ಪರಿಸ್ಥಿತಿ ಬಂದಿತ್ತು. ಈ ವರ್ಷವೂ ಕ್ಷಾಮ ಪರಿಸ್ಥಿತಿ ಇದ್ದೇ ಇದೆ. ಕುರಿ ಕೋಳಿಗಳು ಸತ್ತುಹೋಗಿವೆ. ಜನರು ಜೀವನ ನಡೆಸುವುದೇ ಕಷ್ಟವಾಗಿದೆ. ಪ್ರತಿದಿನ ನೂರಾರು ಜನರು ನನ್ನಮನೆ ಬಾಗಿಲಿಗೆ ಬಂದು ನೀವು ನಮ್ಮ ಪ್ರತಿಧಿಗಳಾಗಿದ್ದುಕೊಂಡು ನಮಗೆ ಏನು ಸಹಾಯ ಮಾಡುತ್ತಿದ್ದೀರಿ ಎಂದು ನನ್ನನ್ನು ಅವರು ಕೇಳುತ್ತಿದ್ದಾರೆ. ಈ ಪುಸ್ತಕದ ಪ್ರಕಾರ ಪರಿಹಾರವನ್ನು ಕೊಡುವುದಕ್ಕೆ ಬರುವುದಿಲ್ಲವೆಂದು ತಾವು ಹೇಳುತ್ತಿದ್ದೀರಿ. ನಾನು ತಮ್ಮನ್ನು ಕೇಳುತ್ತೇನೆ, ತಾವು ಏತಕ್ಕೆ ಪರಿಹಾರವನ್ನು ಕೊಡುವುದಿಲ್ಲ. ಈ ಪುಸ್ತಕದಲ್ಲಿ ಹಾಗಂತ ಎಲ್ಲೂ ಇಲ್ಲ. ಇದು ಸ್ಮಾಲ್ ಫಾರ್ಮರ್ಸ್‌ಗೆ, ಹರಿಜನಗಿರಿಜನರಿಗೆ ಕೊಟ್ಟಿರತಕ್ಕ ಸಾಲ. ನೀವು ಇದನ್ನು ಕಡ್ಡಾಯವಾಗಿ ವಸೂಲ್ಮಾಡುವುದಾದರೆ ಜನರು ಡೆಪ್ಯುಟಿ ಕಮಿಷನರ್‌ರವರ ಆಫೀಸಿಗೆ ಹೋಗಿ ಮುತ್ತಿಗೆ ಹಾಕಬೇಕಾಗುತ್ತದೆ. ನಾನು ಈ ಪುಸ್ತಕದ ಎಲ್ಲ ಸೆಕ್ಷನ್‌ಗಳನ್ನೂ ಓದಿ ನೋಡಿದ್ದೇನೆ, ಪರಿಹಾರವನ್ನು ಕೊಡಬಾರದೆಂದು ಈ ಪುಸ್ತಕದಲ್ಲಿ ಎಲ್ಲೂ ಇಲ್ಲ. ಇವತ್ತು ಏನು ಅನ್ಯಾಯವಾಗಿವೆ ಅದನ್ನು ನ್ಯಾಚುರಲ್ ಕೆಲಾಮಿಟಿ ಅಂತ ತೆಗೆದುಕೊಂಡು ಅದಕ್ಕೆ ಪರಿಹಾರವನ್ನು ಕೊಡಬೇಕು. ದೊಡ್ಡ ದೊಡ್ಡವರಿಗೆ ಕೊಡಬೇಡಿ. ಯಾರು ೨ ಎಕರೆ, ೩ ಎಕರೆ ಜಮೀನು ಇಟ್ಟುಕೊಂಡು, ಬ್ಯಾಂಕ್‌ನಿಂದ ೨-೩ ಸಾವಿರ ರೂ. ಸಾಲ ತಂದು ಕುರಿ ಕೊಂಡುಕೊಂಡು ಇವತ್ತು ಅವು ಸತ್ತು ನಷ್ಟಕ್ಕೆ ಸಿಕ್ಕಿದ್ದಾರೆ ಅಂಥವರಿಗೆ ತಾವು ಪರಿಹಾರವನ್ನು ಕೊಡಬೇಕಾಗುತ್ತದೆ.

ಶ್ರೀ ಎ. ಬಸವರಾಜ ಪಾಟೀಲ್.—ಸ್ವಾಮಿ, ನಮ್ಮ ರಾಯಚೂರು ಜಿಲ್ಲೆಯ ಲಿಂಗಸೂಗೂರು ಗ್ರಾಮದಲ್ಲಿ ಈಗ್ಗೆ ಎರಡು ತಿಂಗಳ ಹಿಂದೆ ಮಳೆ ಹಾಗೂ ಸಿಡಿಲಿನ ಬಡಿತದಿಂದ ಸುಮಾರು ೩-೩½ ಸಾವಿರ ಕುರಿಗಳು ಸತ್ತುಹೋಗಿವೆ. ಆ ಕುರಿಗಳನ್ನು ಸಾಕಿದ್ದ ಪರೆಲ್ಲರೂ ಬಹಳ ಬಡವರು. ಈ ಬಗ್ಗೆ ತಮಗೆ ಪರಿಹಾರವನ್ನು ಕೊಡಬೇಕೆಂದು ಅಲ್ಲಿನ ಜನರಿಂದ ಸರ್ಕಾರಕ್ಕೆ ಒಂದು ಬೇಡಿಕೆ ಬಂದಿದೆ. ಆದ್ದರಿಂದ ತಾವು ಅವರಿಗೂ ಪರಿಹಾರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಎಷ್ಟೋ ಕಡೆ ವೆಟರಿನರಿ ಡಾಕ್ಟರ್‌ಗಳೇ ಇಲ್ಲವೆಂದು ಕೇಳಿಬಂದಿದೆ...

ಶ್ರೀ ವೈ. ರಾಮಕೃಷ್ಣ.—ಡಾಕ್ಟರ್‌ಗಳು ಇಲ್ಲ, ಸಿಬ್ಬಂದಿ ಇಲ್ಲವೆಂದು ಅಲ್ಲ; ರೋಗ ಇರುವ ಕಡೆಗಳಿಗೆ ಡಾಕ್ಟರ್‌ಗಳು ಹೋಗುವಂತೆ ಹೇಳಿರುತ್ತೇವೆ. ಬಳ್ಳಾರಿಗೆ ಮೊಬೈಲ್ ವ್ಯಾನ್ ಕಳಿಸಿಕೊಟ್ಟಿದ್ದೇವೆ. ತುಮಕೂರಿನಲ್ಲಿರತಕ್ಕ ಡಾಕ್ಟರ್‌ಗಳು ಈಗಾಗಲೇ ಮೊಬೈಲ್ ವ್ಯಾನ್ ತೆಗೆದುಕೊಂಡು ಹೋಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಆದರೆ ಡಾಕ್ಟರ್‌ಗಳು ಇಲ್ಲವೆಂದು ಹೇಳುವುದು ಸಾದುವಲ್ಲ. ನಮ್ಮ ಮಾನ್ಯ ಸ್ನೇಹಿತರೊಬ್ಬರು ಮಾತನಾಡುತ್ತಾ ಈಗ ಬ್ಯಾಂಕ್‌ಗಳಿಂದ ಸಾಲವನ್ನು ಪಡೆದುಕೊಂಡ ಸಣ್ಣ ಹಿಡುವಳಿದಾರರು, ಬಡವರು ಯಾರಿದ್ದಾರೆ ಅವರು ತಂದಿದ್ದಂಥ ಕುರಿಗಳು ರೋಗಕ್ಕೆ ತುತ್ತಾಗಿರುವುದರಿಂದ ಈಗ ಆ ಸಾಲವನ್ನು ಹೇಗೆ ತೀರಿಸಬೇಕೆಂದು ಬಹಳ ಸೀರಿಯಸ್ ಆಗಿ ಕೇಳಿದರು. ಆದ್ದರಿಂದ ನಾನು ಅವರಿಗೆ ತಮ್ಮ ಮೂಲಕ ಇಷ್ಟು ಮಾತ್ರ ಹೇಳಬಯಸುತ್ತೇನೆ. ಬಡವರಿಗೆ, ಸಣ್ಣ ರೈತರಿಗೆ, ಅತಿ ಸಣ್ಣ ರೈತರಿಗೆ, ಹಿಂದುಳಿದವರ್ಗದವರಿಗೆ ನಾವು ಹಣವನ್ನು ಏನು ಕೊಡಿಸಿದ್ದೇವೆ. ಅದರಿಂದ ತೆಗೆದುಕೊಂಡಿರತಕ್ಕ ಪ್ರಾಣಿಗಳೆಲ್ಲವೂ ಇನ್‌ಷೂರೆನ್ಸ್ ಕೆಳಗಡೆ ಬರುತ್ತವೆ. ಇನ್‌ಷೂರೆನ್ಸ್ ಇಲ್ಲದೆ ಹಣವನ್ನು ಕೊಡಿಸಿಲ್ಲ. ಇದರಲ್ಲಿ ೩ ಸಾವಿರ ರೂಪಾಯಿಗೆ ಇನ್‌ಷೂರೆನ್ಸ್ ಮಾಡಿಸಿ ೧ ಸಾವಿರ ರೂ.ನ್ನು ಸಬ್ಸಿಡಿಯಾಗಿ ಕೊಡಲಾಗಿದೆ. ಇನ್‌ಷೂರೆನ್ಸ್ ಮಾಡಿಸಿರುವುದರಿಂದ ಕುರಿಗಳು ಸತ್ತರೆ ಕೂಡಲೆ ಅವರಿಗೆ ಇನ್‌ಷೂರೆನ್ಸ್ ಹಣ ಬರುತ್ತದೆ. ಈ ಹಣ ಅವರ ಕೈಗೆ ಬರುವುದಿಲ್ಲ. ನೇರವಾಗಿ ಬ್ಯಾಂಕ್‌ಗೆ ಹೋಗುತ್ತದೆ. ಒಂದು ವೇಳೆ ಯಾವುದಾದರೂ ಬ್ಯಾಂಕ್‌ನವರು ಸತ್ತಂಥ ಕುರಿಗಳಿಗೆ ಹಣವನ್ನು ತೆಗೆದುಕೊಂಡಿದ್ದರೆ ಅಂಥಾದ್ದನ್ನು ತಾವು ನನ್ನ ಗಮನಕ್ಕೆ ತಂದರೆ ಕೂಡಲೇ ಇನ್‌ಷೂರೆನ್ಸ್ ಡಿಪಾರ್ಟ್‌ಮೆಂಟ್‌ನಿಂದ ಹಣವನ್ನು ವಾಪಸು ಕೊಡಿಸುತ್ತೇನೆ. ಏಕೆಂದರೆ ಈ ಆಕ್ಟ್‌ನಲ್ಲಿ ಆ ರೀತಿ ಅಳವಡಿಸಿದ್ದೇವೆ. ಇವತ್ತು ಕೋಟ್ಯಾಂತರ ರೂ. ಗಳನ್ನು ನಾವು ಬಡವರಿಗೆ ಏನು ಕೊಟ್ಟಿದ್ದೇವೆ, ಪ್ರತಿಯೊಂದು ಪ್ರಾಣಿಗೂ ಸಾವು ಇನ್‌ಷೂರೆನ್ಸ್ ಮಾಡಿಸಿದ್ದೇವೆಂದು ಹೇಳಬಯಸುತ್ತೇನೆ. ಆದ್ದರಿಂದ ತಾವು ಇದರ ಬಗ್ಗೆ ತಲೆಮಳಗಿಕೊಳ್ಳಬೇಕಾಗಿಲ್ಲ. ಇನ್ನು ಮೊಬೈಲ್ ಯೂನಿಟ್ಸ್ ವಿಚಾರ ಏನು ಹೇಳಿದ್ದೀರಿ, ಅದು ಸತ್ಯ. ನಾನು ಈಗಾಗಲೇ ಸಾಕಷ್ಟು ಜಿಲ್ಲೆಗಳಿಗೆ ಮೊಬೈಲ್ ಯೂನಿಟ್‌ಗಳನ್ನು ಕಳುಹಿಸಿಕೊಟ್ಟಿದ್ದೇವೆ. ಈಗಾಗಲೇ ೧೧-೧೨ ಯೂನಿಟ್‌ಗಳು ಬಂದಿವೆ. ಇನ್ನೂ ಬರುವುದಿದೆ. ಅವು ಬಂದಕೂಡಲೇ ಕಳುಹಿಸಿಕೊಡುವ ವ್ಯವಸ್ಥೆ ಮಾಡುತ್ತೇವೆ. ಈ ಕುರಿಗಳಿಗೆ ಕಡ್ಡಾಯವಾಗಿ

ಎಮಿನೈಸೇಷನ್ ಮಾಡಿಸಬೇಕೆಂದು ನೀವುಗಳೂ ಹಾಗೂ ನಿಮ್ಮ ಗ್ರಾಮಗಳ ಮುಖಂಡರುಗಳ ಮೂಲಕ ಮತ್ತು ಸಂಘಸಂಸ್ಥೆಗಳ ಮೂಲಕ ಕುರಿ ಸಾಕಿರುವವರಿಗೆ ತಿಳುವಳಿಕೆ ಹೇಳಬೇಕು. ಅವರು ನಮ್ಮ ಮಾತು, ಅಧಿಕಾರಿಗಳು ಮಾತು, ಕೇಳುವುದಿಲ್ಲ. ಈ ಬಾಬಿಗಾಗಿ ಸರ್ಕಾರದಿಂದ ಎಷ್ಟೇ ಹಣ ಖರ್ಚಾದರೂ ಹಿಂದು ಮುಂದು ನೋಡುವುದಿಲ್ಲವೆಂದು ಹೇಳಬಯಸುತ್ತೇನೆ.

೩-೦೦ ಪಿ. ಎಂ.

ಆಕ್ಟನ್ನೇ ಅಮೆಂಡ್ ಮಾಡಬೇಕೆಂದು ಹೇಳಿ ಇರುತ್ತೇವೆ. ಈಗಿರತಕ್ಕಂಥ ಆಕ್ಟ್‌ನಲ್ಲಿ ಕೊಡ ಬೇಕೆಂದೂ ಹೇಳಿಲ್ಲ. ಕೊಡಬಾರದೆಂದೂ ಹೇಳಿಲ್ಲ. ಕೊಡಬೇಕೆಂದು ಹೇಳಿದರೆ, ಹೇಗೆ ಕೊಡ ಬೇಕೆಂಬುದು ಬರುತ್ತದೆ. ಮಾನವೀಯತೆಯ ದೃಷ್ಟಿಯಿಂದ ಯಾರು ಜೀವನೋಪಾಯವನ್ನು ಇದರಿಂದಲೇ ಹೊಂದಿಕೊಂಡಿರುತ್ತಾರೋ ಅಂಥವರಿಗೆ ಪರಿಹಾರ ಕೊಡುವುದು ಸೂಕ್ತವಾಗಿರುತ್ತದೆ. ಉದಾಹರಣೆಗೆ ಬಳ್ಳಾರಿಯಲ್ಲಿ ಕಾರ್ಮಿಕರ ಸಭೆಯನ್ನು ಕರೆದಿದ್ದಾಗ ಕುರಿಸಾಕಾಣೆ ಯಿಂದಲೇ ಜೀವನೋಪಾ ಯವನ್ನು ಹೊಂದಿಕೊಂಡಿರತಕ್ಕಂಥ ಎಷ್ಟು ಜನ ಇದ್ದಾರೆಂದು ಹೇಳಿದಾಗಅಲ್ಲಿದ್ದ ೬೦ಜನರಪೈಕಿಮೂರು ಜನ ೨೦-೩೦-೬೦ ಕುರಿಗಳನ್ನು ಕಳೆದುಕೊಂಡಿದ್ದವರು ಅರ್ಜಿಯನ್ನು ಹಾಕಿಕೊಂಡಿದ್ದರು. ಅಂಥವರುಬಗ್ಗೆ ಕರುಣೆತೋರಿಸಿ ಅವರ ಜೀವನೋಪಾಯಕ್ಕೆ ಅಡ್ಡಿಯಾಗದಂತೆ,ಅವರುಸಮಾಜದಲ್ಲಿ ಹಾಳಾಗುವುದಕ್ಕೆಬಿಡು ವುದಿಲ್ಲವೆಂದು ಹೇಳುತ್ತೇನೆ. ಸರ್ಕಾರ ಮಾನವೀಯತೆಯ ದೃಷ್ಟಿಯಿಂದ ಅವರಿಗೆ ಬೇಕಾದ ಎಲ್ಲ ಸವಲತ್ತುಗಳನ್ನು ಕೊಡುವಸಲುವಾಗಿಯೇ ಎಲ್ಲ ಕಾರ್ಯಕ್ರಮಗಳನ್ನು ಸರ್ಕಾರದವರು ಹಾಕಿಕೊಳ್ಳುತ್ತಾ ರೆಂದು ಹೇಳುತ್ತೇನೆ. ಆದ್ದರಿಂದ ಕುರಿಗಳ ಸಂಖ್ಯೆ ನಿರ್ದಿಷ್ಟವಾಗಿ ತಾವು ತಿಳಿಸಬೇಕು. ಆಫೀಸರ್ ಕೊಟ್ಟಿರತಕ್ಕಂಥ ಸಂಖ್ಯೆಗೂ, ಅವರು ಕೊಟ್ಟಿರತಕ್ಕಂಥ ಸಂಖ್ಯೆಗೂ ಸುಮಾರು ೮ ಪಟ್ಟು ೧೦ ಪಟ್ಟು ವ್ಯತ್ಯಾಸವಿದೆ. ಅದಕ್ಕೋಸ್ಕರವಾಗಿ ಇಷ್ಟು ಎಂದು ನಿಖರವಾಗಿ ತಿಳಿಸಲು ಆಸಕ್ತಿ ಇರತಕ್ಕಂಥ ಮಾನ್ಯ ಸದಸ್ಯರು ೧೫ನೇ ತಾರೀಖಿನೊಳಗೆ ಸಲಹೆಗಳನ್ನು ಕೊಟ್ಟಲ್ಲಿ ಅವುಗಳನ್ನೆಲ್ಲ ಕ್ರೂಡೀಕರಿಸಿ ಉತ್ತರದಲ್ಲಿ ಏನು ಸಹಾಯ ಮಾಡಬೇಕು ಎನ್ನುವುದು ತಿಳಿಸಲು ತಯಾರಾಗಿದ್ದೇನೆ. I must get reports from my officers to consider the question of compensation relief.

MR. DEPUTY SPEAKER.—I think., we have discussed enough in the matter.

SRI C. M. ARUMUGHAM.—Sir, hundreds of sheep have died. How long will it take to get the reports from his officers ? Why the officers have taken a long time to investigate into the matter ?

SRI Y. RAMAKRISHNA.—It is stated in my statement.

SRI C. M. ARUMUGHAM.—Should it take such a long time ? The Hon. Minister for Law & Parliamentary Affairs is not going to make a policy statement on 13th. Why should the affected farmers wait for relief till then ? The government should have taken a quick action by this time.

ಶ್ರೀ ವೈ. ರಾಮಕೃಷ್ಣ.—ಈಗಾಗಲೇ ಹೇಳಿದ್ದೇನೆ ಎಲ್ಲೆಲ್ಲಿ ಕುರಿಗಳು ಸತ್ತಿವೆ ಆಯಾ ಏರಿಯಾ ದಿಂದ ಬಂದಿರತಕ್ಕಂಥ ಮಾನ್ಯ ಸದಸ್ಯರು ಸಮಾಲೋಚನೆ ಮಾಡಿ ಸಲಹೆಗಳನ್ನು ಮುಂದಿಡಲಿ. ಅದಕ್ಕೆ ಏನು ಪರಿಹಾರ ಕೊಡಬೇಕೋ ಅದನ್ನು ಯೋಚನೆ ಮಾಡಿ ಪರಿಹಾರ ಕೊಡುತ್ತೇವೆ. ಅದಕ್ಕೆ ಟೈಮ್ ಬೇಡವೆ ಈಗಲೇ ಡಿಕ್ಲೇರ್ ಮಾಡಿ ಎಂದು ಹೇಳಿದರೆ who is to determine the quantum of loss ? Should I not get a report from my officers ? It is not covered under any provisions of law. All these things will take not less than 10 days.

SRI K. M. THAMMAIAH.—Sir, it is an important matter which we cannot neglect like this. It isa matter of dumb cattle affair. ತಾವು ಹೇಳಿದಿರಿ ಲೆಕ್ಕ ಸಿಕ್ಕಿಲ್ಲವೆಂದು. ಈಗಿನಕಾಲದವರು ವಿದ್ಯಾವಂತ ಪೀಳಿಗೆ ಲೆಕ್ಕ ಕೊಡುತ್ತಾರೆ. ಬ್ಯಾಂಕಿನಲ್ಲಿ ಲೆಕ್ಕವಿರುತ್ತದೆ ಕೊಡುತ್ತಾರೆ. ಹಿಂದಿನಕಾಲದಜನ ಏನೂ ಹೇಳುವುದಕ್ಕೆ ಹೋಗುವುದಿಲ್ಲ. ತಾವು ಕೊಡತಕ್ಕಂಥ ಪರಿಹಾರ ಸುಮಾರು ಒಂದುನೂರು ಐರಡುನೂರು ರೂಪಾಯಿಗಳಾದರೆ ಅದರ ಚರ್ಚೆದ ಬೆಲೆ ಬಾಳುವುದಿಲ್ಲ. ಇನ್ನು ಲಸಿಕೆ ವಿಚಾರದಲ್ಲಿ ಟೈಮ್ ಕೊಡಿ ಎಂದು ಹೇಳಿದಿರಿ, ಒಂದೊಂದು ಡಿಸ್ಟ್ರಿಕ್ಟ್‌ಗೆ ಒಂದೊಂದುವರ್ಷ ಲಸಿಕೆಯನ್ನು ಹಾಕತಕ್ಕಂಥ ವಿಪ್ಪಾಡುಮಾಡಿ ಆದರಿಂದ ಬಹಳ ಅನುಕೂಲವಾಗುತ್ತದೆಂದು ಹೇಳುತ್ತೇನೆ.

FINANCIAL BUSINESS

Further discussion on demands No. 28 and 29

† ಶ್ರೀ ಎಚ್. ವಿಶ್ವನಾಥ್ (ಕೆ. ಆರ್. ನಗರ್).—ಸನ್‌ಮಾನ್ಯ ಅಧ್ಯಕ್ಷರೇ ಈ ಸದನದ ಮುಂದೆ ಮಾನ್ಯ ಆರೋಗ್ಯಸಚಿವರು ಆವರ ಇಲಾಖೆಗೆ ಸಂಬಂಧಪಟ್ಟಂತೆ ತಂದಿರತಕ್ಕಂಥ ಬೇಡಿಕೆಯನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತ ಎರಡು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ.

ಸನ್‌ಮಾನ್ಯ ಆರೋಗ್ಯಸಚಿವರು ತಮ್ಮ ಇಲಾಖೆಯಲ್ಲಿ ಹಲವಾರು ಸಾಧನೆಗಳನ್ನು ಸಾರ್ವಜನಿಕರ ಆರೋಗ್ಯ ದೃಷ್ಟಿಯಿಂದ ಮಾಡಿದ್ದಾರೆ. ಕೇಂದ್ರ ಸರ್ಕಾರದವರ ಸಹಾಯದಿಂದ ಸುಮಾರು ಮೂವತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮತ್ತು ರಾಜ್ಯ ಸರ್ಕಾರದ ವತಿಯಿಂದ ಸುಮಾರು ೬೧ ಪ್ರಾಥಮಿಕ ಆರೋಗ್ಯ ಘಟಕಗಳನ್ನು ತೆರೆದು ಹೀಗೆ ಹಲವಾರು ಕಾರ್ಯಕ್ರಮಗಳನ್ನು ಈ ರಾಜ್ಯದಲ್ಲಿ ಸಾಧಿಸಲಾಗಿದೆ ಎಂದು ತೋರಿಸಿದ್ದಾರೆ. ಹೀಗೆ ಸಾರ್ವಜನಿಕ ಆರೋಗ್ಯವನ್ನು ಸುದಾರಿಸುವ ದೃಷ್ಟಿಯಿಂದ ನಮ್ಮ ಆರೋಗ್ಯ ಇಲಾಖೆಯವರು ಬಹಳವಾಗಿ ಪ್ರಯತ್ನ ಪಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೇ ಈ ಸಂದರ್ಭದಲ್ಲಿ ನಾನು ಹೆಚ್ಚಿಗೆ ಯಾವುದೇ ವಿಚಾರಗಳನ್ನು ತೆಗೆದುಕೊಳ್ಳುವುದಕ್ಕೆ ಹೋಗದೆ ಮತ್ತೆ ಬೇರೆ ಬೇರೆ ಕಾರ್ಯಕ್ರಮಗಳನ್ನು ಹೆಚ್ಚು ಹೆಚ್ಚು ಹಾಕಿಕೊಳ್ಳಬೇಕೆಂದು ಹೇಳಿದೆ ನಮ್ಮ ಇಲಾಖೆಯಲ್ಲಿ ಈಗ ಇರತಕ್ಕಂಥ ಏನು ವ್ಯವಸ್ಥೆ ಇದೆ ಅದನ್ನು ಸರಿಯಾದ ರೀತಿಯಲ್ಲಿ ಸುವ್ಯವಸ್ಥಿತವಾದ ರೀತಿಯಲ್ಲಿ ಮಾಡಿಕೊಂಡು ಹೋಗಿ ಎನ್ನುವ ಒಂದು ಮಾತನ್ನು ಮೊಟ್ಟಮೊದಲನೆಯಾಗಿ ಹೇಳುವುದೇನೆಂದರೆ ನಮ್ಮಲ್ಲಿ ಸುಮಾರು ೯೩ಎಕ್ಸ್‌ರೆ ಘಟಕಗಳನ್ನು ತಾವು ಕೋಟ್ಟಿದ್ದೇವೆಂದು ಹೇಳಿದ್ದೀರಿ. ಈಗಿ ಎಕ್ಸ್‌ರೆ ಘಟಕಗಳಲ್ಲಿ ಸುಮಾರು ೬೦ ಎಕ್ಸ್‌ರೆ ಘಟಕಗಳು ಡಿಫಂಕ್ಟ್ ಆಗಿ ನಿಂತಿವೆ. ಮತ್ತೆ ನಮ್ಮಲ್ಲಿರತಕ್ಕಂಥ ೯೫೧೧ ವಾಹನಗಳಲ್ಲಿ ಸುಮಾರು ನಾಲ್ಕುನೂರು ಚಿಲ್ಲರೆ ವಾಹನಗಳು ಚಾಲನೆ ಇಲ್ಲದೆ. ನಿಂತಿವೆ. ಹೀಗಿರುವಾಗ ಈವತ್ತಿನದಿವಸ ನಾವು ಹೆಚ್ಚಾಗಿ ಹಣವನ್ನು ಕೇಳುವುದರಲ್ಲಿ ಯಾವ ಪ್ರಯೋಜನವೂ ಇಲ್ಲ. ಇಂಥ ಹಲವಾರು ನ್ಯೂನ್ಯತೆಗಳು ಇಲಾಖೆಯಲ್ಲಿ ಇರುತ್ತದೆ. ಆದುದರಿಂದ ಇರತಕ್ಕಂಥ ವ್ಯವಸ್ಥೆಯಲ್ಲಿ ಸುವ್ಯವಸ್ಥಿತವಾಗಿ ಇಲಾಖೆಯನ್ನು ನಡೆಸಿಕೊಂಡು ಹೋಗಬೇಕೆಂದು ಮಾನ್ಯ ಸಚಿವರಲ್ಲಿ ಮನವಿಮಾಡಿಕೊಳ್ಳುತ್ತೇನೆ.

ಮತ್ತೆ ಮಾನ್ಯ ಅಧ್ಯಕ್ಷರೇ ಈ ಟ್ರಾನ್ಸ್‌ಫರ್ಸ್ ಮತ್ತು ಪೋಸ್ಟಿಂಗ್ಸ್ ವಿಚಾರದಲ್ಲಿ ಹಲವಾರು ಸದಸ್ಯರು ಆವರವರ ಅಭಿಪ್ರಾಯಗಳನ್ನು ಮತ್ತು ಸಲಹೆಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ನನಗೆ ಬಹಳ ದುಃಖಿವಾಗಿ ಹೇಳಬೇಕಾದ ಸಂಗತಿಯೆಂದರೆ ಸರ್ಕಾರದವರು ಯಾವ ಒಬ್ಬ ವೈದ್ಯನಿಗೆ ಹಣವನ್ನು ಖರ್ಚುಮಾಡಿ ಎಂ. ಎಸ್. ಮತ್ತು ಎಂ.ಡಿ. ಡಿಗ್ರಿಗಳನ್ನು ಕೊಟ್ಟು ಸಾರ್ವಜನಿಕ ಸೇವೆಯಲ್ಲಿ ತೊಡಗಲಿ ಎಂದು ಹೆಚ್ಚಿನ ಒಂದು ವ್ಯಾಸಂಗವನ್ನು ಕೊಟ್ಟಂಥವರನ್ನು ಎಲ್ಲೋ ಮೂಲೆ ಮೂಲೆ ಹಳ್ಳಿಗಳಿಗೆ ಹಾಕಿ ಕಾಲೆ ಎಂ.ಬಿ.ಬಿಎಸ್., ಮಾಡಿರತಕ್ಕಂಥವರನ್ನು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ಸ್‌ನಲ್ಲಿ ಹಾಕತಕ್ಕಂಥದ್ದು ತುಂಬ ಶೋಚನೀಯವಾದ ಪ್ರಸಂಗ ವಾಗಿರುತ್ತದೆ. ಮೈಸೂರಿನಲ್ಲಿ ಡಿಸ್ಟ್ರಿಕ್ಟ್ ಸರ್ಜನ್ ನಾಯ್ಡು ಎಂದು ಹೇಳಿ ಅವರನ್ನು ನೇಮಿಸಿರುತ್ತಾರೆ. ಅವರ ಕ್ವಾಲಿಫಿಕೇಷನ್ ಎಲ್. ಎಂ. ಪಿ. ಅವರಿಗೆ ಪ್ರಮೋಷನ್ ಕೊಟ್ಟು ಡಿಸ್ಟ್ರಿಕ್ಟ್ ಸರ್ಜನ್ ಆಗಿ ಪೋಸ್ಟಿಂಗ್ಸ್ ಮಾಡಿರುತ್ತಾರೆ.